# ಹಂಪಿ ಟೈಮ್ಸ್

HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper
www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:247 • ನೋಂದಣಿ ನಂ.:KARKAN27911 • ವಿಜಯನಗರ • 25.02.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:247 • Reg.No:KARKAN27911 • VIJAYANAGARA • 25.02.2024 • Sunday • Page:04 • Rs:2


## ಗುಡೇಕೋಟೆ ಉತ್ಸವ: ಸಮಾರೋಪ ಸಮಾರಂಭ ಫೆ.25ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತ ಇವರ ಸಹಯೋಗದಲ್ಲಿ ಗುಡೇಕೋಟೆ ಉತ್ಸವದ ಸಮಾರೋಪ ಸಮಾರಂಭವನ್ನು ಫೆ.25ರಂದು ಸಂಜೆ 6 ಗಂಟೆಗೆ ಗುಡೇಕೋಟೆಯ ಒನಕೆ ಓಬವ್ವ ವೇದಿಕೆಯಲ್ಲಿ ಆಯೋಜಿಸಲಾಗಿದೆ.

ಕೂಡ್ಲಿಗಿ ಶಾಸಕ ಡಾ.ಶ್ರೀನಿವಾಸ ಎನ್.ಟಿ ಅವರು ಅಧ್ಯಕ್ಷತೆ ವಹಿಸುವರು. ಸರ್ಕಾರದ ವಿವಿಧ ಕ್ಷೇತ್ರಗಳ ಜನಪ್ರತಿನಿಧಿಗಳು, ಜಿಲ್ಲೆಯ ಶಾಸಕರು, ಸಂಸದರು ಪಾಲ್ಗೊಳ್ಳಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ.

## ಗುಡೇಕೋಟೆ ಉತ್ಸವ: ಇಂದು ನಾನಾ ಕಾರ್ಯಕ್ರಮಗಳು

**ಹಂಪಿ ಟೈಮ್ಸ್ ಹೊಸಪೇಟೆ**

ಗುಡೇಕೋಟೆ ಉತ್ಸವ ಹಿನ್ನೆಲೆಯಲ್ಲಿ ಫೆಬ್ರುವರಿ 25 ಭಾನುವಾರದಂದು ಒನಕೆ ಓಬವ್ವ ವೇದಿಕೆಯಲ್ಲಿ ನಾನಾ ಕಾರ್ಯಕ್ರಮಗಳು ನಡೆಯಲಿವೆ.

ಮಧ್ಯಾಹ್ನ 12 ರಿಂದ 1.30 ರವರೆಗೆ ಗುಡೇಕೋಟೆಯ ಶಶಿಕಿರಣ್ ನಿವೃತ್ತ ಪ್ರಾಚಾರ್ಯರಾದ ಡಾ.ರಾಜಣ್ಣ ಗುಡೇಕೋಟೆ ಅವರಿಂದ ಒನಕೆ ಓಬವ್ವ ಮತ್ತು ಗುಡೇಕೋಟೆ ಪಾಳೆಗಾರರು ಕುರಿತು ವಿಚಾರ ಸಂಕೀರ್ಣ, ಸಂಜೆ 4.30 ರಿಂದ 7 ಗಂಟೆಯವರೆಗೆ ಸ್ಥಳೀಯ ಕಲಾವಿದರಿಂದ ನೃತ್ಯ, ಹಾಡು ಮತ್ತು ಇತರೆ ಕಲೆಗಳ ಪ್ರದರ್ಶನ, 7 ರಿಂದ 7.30 ರವರೆಗೆ ತಿಪ್ಪೇಸ್ವಾಮಿ ಬಡೇಲಡಕು ಅವರಿಂದ ತೊಗಲುಗೊಂಬೆ ಆಟ, 7.30 ರಿಂದ 8ರವರೆಗೆ ವಿಶೇಷ ಸಾಧಕರಿಗೆ ಹಾಗೂ ಊರಿನ ಗಣ್ಯರಿಗೆ ಸನ್ಮಾನ, ರಾತ್ರಿ 8 ರಿಂದ 9ರವರೆಗೆ ಶಿವನಾಯಕ ದೊರೆ ಮತ್ತು ತಂಡದವರಿಂದ ಹಲಗಲಿ ಬೇಡರು ನಾಟಕ ಪ್ರದರ್ಶನ, 9 ರಿಂದ 10ರವರೆಗೆ ಬೆಂಗಳೂರಿನ ಕಾಮಿಡಿ ಕಿಲಾಡಿಗಳು ತಂಡದಿಂದ ವಿಶೇಷ ಹಾಸ್ಯ ಕಾರ್ಯಕ್ರಮ, ರಾತ್ರಿ 10 ರಿಂದ ಸ್ಥಳೀಯ ಕಲಾವಿದರಿಂದ ನಾಟಕ ಪ್ರದರ್ಶನ ನಡೆಯಲಿದೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
>
> ಡಿ.ವಿ.ಜಿ.

# ಗುಡೇಕೋಟೆ ಪ್ರವಾಸಿ ತಾಣವಾಗಿಸಲು ಬದ್ಧ ಅಭಿವೃದ್ಧಿಗೆ ಮೂರು ಕೋಟಿ ರೂ. ಬಿಡುಗಡೆ

### ಗುಡೇಕೋಟೆ ಉತ್ಸವದ ರೂವಾರಿ ಶಾಸಕ ಡಾ.ಶ್ರೀನಿವಾಸ ಎನ್.ಟಿ. ಹೇಳಿಕೆ | ಜನರ ಪ್ರೀತಿ ಎಂದಿಗೂ ಮರೆಯಲಾರೆ



**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತ ಇವರ ಸಹಯೋಗದಲ್ಲಿ ಫೆ.24 ಮತ್ತು ಫೆ.25ರಂದು ಎರಡು ದಿನಗಳ ನಿಗದಿಯಾಗಿದ್ದ ಗುಡೆಗೋಟೆ ಉತ್ಸವಕ್ಕೆ ಫೆ.24ರ ಸಂಜೆ ವಿದ್ಯುಕ್ತ ಚಾಲನೆ ಸಿಕ್ಕಿತು.

ಗುಡೇಕೋಟೆಯ ಒನಕೆ ಓಬವ್ವ ವೇದಿಕೆಯಲ್ಲಿ ಧಾನ್ಯಗಳನ್ನು ಮಡಿಕೆಗೆ ಹಾಕುವುದರ ಮೂಲಕ ಕೂಡ್ಲಿಗಿ ಶಾಸಕರಾದ ಡಾ.ಶ್ರೀನಿವಾಸ್ಎನ್.ಟಿ. ಅವರು ಉತ್ಸವಕ್ಕೆ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ, ನುಡಿದಂತೆ ನಡೆದ ಶಾಸಕರೆಂದು ತಮಗೆ ಸಾರ್ವಜನಿಕರು ಒಪ್ಪಿಕೊಂಡಿದ್ದು ಇದರಿಂದ ತಮಗೆ ಬಹಳ ಸಂತಷವಾಗಿದೆ. ಗುಡೇಕೋಟೆ ಉತ್ಸವವು ದಾಖಲೆಯ ರೀತಿಯಲ್ಲಿ ನಡೆಯುವಂತೆ ಸಾರ್ವಜನಿಕರು ತಿಳಿಸಿದ್ದರು. ಅದರಂತೆ ಉತ್ಸವ ನಡೆಸಲಾಗಿದೆ ಎಂದರು. ಜನರ ಪ್ರೀತಿಯನ್ನು ಎಂದಿಗೂ ಮರೆಯಲಾರೆ. ಗುಡೇಕೋಟೆಯನ್ನು ಪ್ರವಾಸಿ ತಾಣನ್ನಾಗಿಸಲು ಪ್ರಯತ್ನಿಸುವೆ. ಗುಡೇಕೋಟೆ ಅಭಿವೃದ್ದಿಗೆ ಸರ್ಕಾರದಿಂದ 3 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಹೇಳಿದರು. ಗುಡೇಕೋಟೆಯ ಮಕ್ಕಳು ವಿದ್ಯಾವಂತರಾಗಿ ಉನ್ನತ ಹುದ್ದೆ ಏರಬೇಕು ಎಂಬುದು ತಮ್ಮ ಬಹುದೊಡ್ಡ ಆಶಯವಾಗಿದೆ ಎಂದು ಶಾಸಕರು ತಿಳಿಸಿದರು.

ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಅವರು ಮಾತನಾಡಿ, ಗುಡೇಕೋಟೆ ಉತ್ಸವವು ಹಂಪಿ ಉತ್ಸವವನ್ನು ನೆನಪಿಸುವ ಹಾಗೆ ನಡೆಯುತ್ತಿರುವುದು ಸಂತಸ ತಂದಿದೆ ಎಂದು ತಿಳಿಸಿದರು. ಇದರ ರೂವಾರಿಯಾದ ಶಾಸಕರ ಶ್ರಮವು ಶ್ಲಾಘನೀಯವಾಗಿದೆ ಎಂದರು. ವೀರವನಿತೆ ಒನಕೆ ಓಬವ್ವನ ಶೌರ್ಯ ಸಾಹಸ ಹೇಗೆ ಅಜರಾಮರವಾಗಿದೆಯೋ ಅದೇ ರೀತಿ ಈ ಉತ್ಸವವು ಇತಿಹಾಸ ಪುಟಗಳಲ್ಲಿ ದಾಖಲಾಗುವುದು ಎಂದು ತಿಳಿಸಿದರು.

ವಿಶೇಷ ಆಹ್ವಾನಿತರಾಗಿದ್ದ ಮಾತಾ ಮಂಜಮ್ಮ ಜೋಗತಿ ಅವರು ಮಾತನಾಡಿ, ಹಂಪಿ ಉತ್ಸವವನ್ನು ಎಂ.ಪಿ.ಪ್ರಕಾಶ ಅವರು ಆರಂಭಿಸಿದ್ದರು. ಹಾಗೇಯೆ ಗುಡೇಕೋಟೆ ಉತ್ಸವವನ್ನು ಡಾ.ಶ್ರೀನಿವಾಸ್ ಎನ್.ಟಿ. ಅವರು ಆರಂಭಿಸಿ ಹೊಸ ಸಂಪ್ರದಾಯ ಆರಂಭಿಸಿದ್ದಾರೆ. ಇದು ತಾಲೂಕಿನ ಜಿಲ್ಲೆಯ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಂಸದರಾದ ವಿ.ಎಸ್. ಉಗ್ರಪ್ಪ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕಅಧಿಕಾರಿ ಸದಾಶಿವ ಪ್ರಭು ಬಿ., ಎಸ್ಪಿ ಶ್ರೀಹರಿಬಾಬು ಬಿ.ಎಲ್., ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಉಪವಿಭಾಗಾಧಿಕಾರಿ ಮೊಹಮ್ಮದ್ ಅಕ್ರಂ ಷಾ ಅಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಸಿದ್ದಲಿಂಗೇಶ ರಂಗಣ್ಣನವರ, ಕೂಡ್ಲಿಗಿ ತಹಸೀಲ್ದಾರರಾದ ರಾಜು ಫಿರಂಗಿ, ಕೂಡ್ಲಿಗಿಯ ಹಿರೇಮಠ ಸಂಸ್ಥಾನದ ಗುರುಗಳಾದ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮಿಗಳು, ಒನಕೆ ಓಬವ್ವ ವಂಶಸ್ಥರಾದ ರಾಜಣ್ಣ, ಪಾಳೆಗಾರ ವಂಶಸ್ಥರಾದ ಶಿವರಾಜ ವರ್ಮ ಹಾಗೂ ಗ್ರಾಮ ಪಂಚಾಯತಿಯ ಅಧಿಕಾರಿಗಳು ಇತರರು ಉಪಸ್ಥಿತರಿದ್ದರು.








ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

## ಆಡುವ ಮಾತಿನಲ್ಲಿರಲಿ ಎಚ್ಚರ

ಇತ್ತೀಚೆಗೆ ಪದೇಪದೆ ಕೇಳಿಬರುವ ಮಾತು ಎಂದರೆ **'ನಮ್ಮ ತೆರಿಗೆ ನಮ್ಮ ಹಕ್ಕು'**. ಸಿಎಂ ಸಿದ್ದರಾಮಯ್ಯ ಅವರು ಸೇರಿದಂತೆ ರಾಜ್ಯ ಕಾಂಗ್ರೆಸ್ ಸರ್ಕಾರದ ಎಲ್ಲ ಸಚಿವರು ಇದೇ ಮಾತನ್ನು ಮಂತ್ರದಂತೆ ಉಚ್ಛರಿಸುತ್ತಿದ್ದಾರೆ. ಕೇಂದ್ರ ಸರ್ಕಾರದಿಂದ ಕರ್ನಾಟಕಕ್ಕೆ ಬಜೆಟ್‌ನಲ್ಲಿ ಮೀಸಲಿಡುವ ಅನುದಾನ ಹಂಚಿಕೆಯಲ್ಲಿ ತೀವ್ರ ಅನ್ಯಾಯವಾಗುತ್ತಿದೆ ಎಂಬುದು ಇವರ ಒಕ್ಕೊರಲ ಧ್ವನಿ. ಈ ರೀತಿ ಕೂಗು ಎದ್ದಿರುವುದು ಇದೇ ಮೊದಲಲ್ಲ. ಆದರೆ, ಇಷ್ಟರ ಮಟ್ಟಿಗೆ ತೀವ್ರವಾಗಿ ಹೋಗಿರಲಿಲ್ಲ. ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದಿದ್ದರೆ ಈ ಮಾತೇ ಅಪ್ರಸ್ತುವಾಗಿರುತ್ತಿತ್ತು. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದೇ ಇಷ್ಟೆಲ್ಲ ರಗಳೆಗಳಿಗೆ ಕಾರಣವಾಗಿದೆ. ಇತ್ತೀಚೆಗಷ್ಟೇ ಕೇರಳದಲ್ಲಿ ಅಧಿಕಾರ ನಡೆಸುತ್ತಿರುವ ಎಲ್‌ಡಿಎಫ್ ಸರ್ಕಾರವೂ ಇದೇ ಬಜೆಟ್ ಅನುದಾನ ಹಂಚಿಕೆಯಲ್ಲಿ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಆರೋಪ ಮಾಡಿತ್ತು. ಕರ್ನಾಟಕ ಸರ್ಕಾರವೂ ಸಹ ಇದೇ ಆರೋಪವನ್ನು ಪರಿಣಾಮಕಾರಿಯಾಗಿ ಮಾಡಿದೆ. ಇದು ಮಾತುಗಳಿಗಷ್ಟೇ ನಿಲ್ಲಲಿಲ್ಲ. ಒಂದು ಹೆಜ್ಜೆ ಮುಂದು ಹೋಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೇಂದ್ರದ ಧೋರಣೆ ವಿರುದ್ಧ ದೆಹಲಿಯಲ್ಲಿ ಫೆ. 7ರಂದು ಧರಣಿಯೂ ನಡೆಸಿದರು. ಇದರಲ್ಲಿ ಹಲವು ಸಚಿವರೂ ಪಾಲ್ಗೊಂಡರು. ಕೇವಲ ಕರ್ನಾಟಕವಲ್ಲ, ದಕ್ಷಿಣ ಭಾರತದಲ್ಲಿ ಅಧಿಕಾರದಲ್ಲಿರುವ ಮತ್ತು ಬಿಜೆಪಿ ಅಧಿಕಾರದಲ್ಲಿ ಇರದೇತರ ರಾಜ್ಯಗಳ ಬಗ್ಗೆ ಕೇಂದ್ರ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದೆ ಎಂಬುದು ಸಿಎಂ ಸಿದ್ದರಾಮಯ್ಯ ಅವರ ಆರೋಪ. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದ ನಡೆಗಳ ಬಗ್ಗೆ, ನೀತಿ–ಧೋರಣೆಗಳ ಬಗ್ಗೆ, ಅನುದಾನ ಹಂಚಿಕೆ ಬಗ್ಗೆ, ಜ್ವಲಂತ ಸಮಸ್ಯೆಗಳ ಪರಿಹರಿಸದ ಬಗ್ಗೆ, ಎರಡು ರಾಜ್ಯಗಳ ನಡುವಿನ ವಿವಾದಕ್ಕೆ ಮಧ್ಯಸ್ಥಿಕೆ ವಹಿಸದ ಬಗ್ಗೆ ಆಗಾಗ್ಗೆ ಪ್ರತಿಭಟನೆಗಳು ಕೇಂದ್ರದ ವಿರುದ್ಧ ನಡೆಯುತ್ತಲೇ ಬಂದಿವೆ. ಕೇಂದ್ರದ ವಿರುದ್ಧ ಧ್ವನಿ ಎತ್ತುವ, ಪ್ರತಿಭಟನೆ ನಡೆಸುವ ಸಾಂವಿಧಾನಿಕ ಹಕ್ಕು ದೇಶದ ಎಲ್ಲ ರಾಜ್ಯಗಳಿಗೆ ಇದೆ. ಇದನ್ನು ಯಾರೂ ಹತ್ತಿಕ್ಕಲು ಸಾಧ್ಯವಿಲ್ಲ. ಆದರೆ, ಈಪರಿ ಆರೋಪಗಳನ್ನು ಮಾಡುವ ಭರದಲ್ಲಿ ರಾಜಕಾರಣಿಗಳು ತಾವಾಡುವ ಮಾತಿನಲ್ಲಿ ಹಿಡಿತ ಹೊಂದಬೇಕಾಗುತ್ತದೆ. ಯಾರೂ ಸಹ, ಯಾವಾಗಲೂ ತಮ್ಮ ವ್ಯಾಪ್ತಿ ಮಿತಿಯಲ್ಲಷ್ಟೇ ಮಾತನಾಡಬೇಕು. ಅದನ್ನು ಮೀರಿ ಹೋಗಿ ಮಾತಿಗೆ ನಿಂತರೆ ಅವರು ಮತ್ತು ಅವರ ಪಕ್ಷ ಸಾರ್ವಜನಿಕರ ಎದುರು ತಲೆತಗ್ಗಿಸಿ ನಿಂತುಕೊಳ್ಳಬೇಕಾಗುತ್ತದೆ. ಇಂಥದೊಂದು ಅನಗತ್ಯವಾದ, ಯಾರೂ ಒಪ್ಪದ ಮತ್ತು ಯಾರೂ ಸಹಿಸದ ವಿವಾದವನ್ನುಹುಟ್ಟುಹಾಕಿದ್ದಾರೆ ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಹೋದರರೂ ಆಗಿರುವ ಸಂಸದ ಡಿ.ಕೆ.ಸುರೇಶ. ಇವರು ಕೇಂದ್ರದ ವಿರುದ್ಧ ಆರೋಪ ಮಾಡುವ ಭರದಲ್ಲಿ ಕೇಂದ್ರದಿಂದ ಹಂಚಿಕೆಯಾಗುವ ಅನುದಾನದಲ್ಲಿ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ತೀವ್ರ ಅನ್ಯಾಯವಾಗುತ್ತಿದೆ. ಕೇಂದ್ರ ಬಿಜೆಪಿ ಸರ್ಕಾರ ಇದೇ ಧೋರಣೆ ಮುಂದುವರಿಸಿದರೆ ನಾವೆಲ್ಲ ಸೇರಿಕೊಂಡು ಪ್ರತ್ಯೇಕ ರಾಷ್ಟ್ರದ ಬೇಕೆಂಬ ಕೂಗೆಬ್ಬಿಸುವುದು ಅನಿವಾರ್ಯವಾಗಲಿದೆ ಎಂದು ಹೇಳಿ ವಿವಾದವನ್ನು ತನ್ನ ಮೈಮೇಲೆ ಎಳೆದುಕೊಂಡಿದ್ದಾರೆ. ಇದು ಕಾಂಗ್ರೆಸ್ ಪಕ್ಷಕ್ಕೂ ಮತ್ತು ಅಲ್ಲಿರುವ ಹಿರಿಯರಿಗೂ ನುಂಗದ ತುತ್ತಾಗಿದೆ. ಪ್ರತ್ಯೇಕ ರಾಷ್ಟ್ರದ ಮಾತನ್ನು ಎಂದಿಗೂ ಯಾರೂ ಒಪ್ಪಲು ಸಾಧ್ಯವಿಲ್ಲ ಎಂಬ ಕನಿಷ್ಠ ಅರಿವೂ ಸುರೇಶ ಅವರಿಗೆ ಇದ್ದಂತಿಲ್ಲ. ಸುರೇಶ ಹೇಳಿಕೆಗೆ ಸಹಜವಾಗಿಯೇ ಭಾರತೀಯ ಜನತಾ ಪಕ್ಷದ ನಾಯಕರು ಕೆಂಡಾಮಂಡಲವಾಗಿದ್ದಾರೆ. ಕಾಂಗ್ರೆಸ್ ನಾಯಕರೇ ಡಿ.ಕೆ.ಸುರೇಶ ಅವರ ಮಾತನ್ನು ಒಪ್ಪಿಲ್ಲ. ಇನ್ಮುಂದೆಯಾದರೂ ಅಧಿಕಾರದಲ್ಲಿರುವ ಜನಪ್ರತಿನಿಧಿಗಳಾಗಲಿ, ಅಧಿಕಾರದಲ್ಲಿ ಇಲ್ಲದಿರುವ ರಾಜಕಾರಣಿಗಳಾಗಲಿ ಪ್ರತ್ಯೇಕ ರಾಷ್ಟ್ರವೆಂಬ ಕಲ್ಪನೆ, ಕನಸೂ ಕಾಣುವುದು ಬೇಡ. ಸಂವಿಧಾನದಲ್ಲಿ ಆಶಯದಲ್ಲಿ ಬದುಕುತ್ತಿರುವ ಭಾರತೀಯರು ಇಂಥ ಅಸಂಬದ್ಧ ಹೇಳಿಕೆಗಳನ್ನು ಸಹಿಸಲ್ಲ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಪ್ರೌಢದೇವರಾಯನ ಆಸ್ಥಾನದ ಮಂತ್ರಿಯ ಪ್ರೌಢಿಮೆ

## ವಿಜಯನಗರದ ಕವಿ, ಮಂತ್ರಿ ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿ

### ಕನ್ನಡದ ಹಿರಿಮೆ ಹೆಚ್ಚಿಸಿದ ವಿಜಯನಗರದ ಸಂಗಮ ವಂಶದ ಅರಸರುಗಳು | "ವಿರುಪಾಕ್ಷ "ಎಂಬ ಕನ್ನಡದ ರಾಜಮುದ್ರೆ ಕನ್ನಡದ ಸಹಿ

**ಹಂಪಿ ಒಳನೋಟ**

ಕನ್ನಡ ನಾಡಿನ ಸಾಹಿತ್ಯ, ಕಲೆ, ಸಂಗೀತ ,ಸಾಂಸ್ಕೃತಿಕ ಪರಂಪರೆಯ ನೆಲ ಹಂಪಿ. ಕ್ರಿ.ಶ. ಐದನೇ ಶತಮಾನದ ಮತಂಗ ಮುನಿಯ ಬೃಹದ್ದೇಶಿಯಿಂದ ಪ್ರಾರಂಭಗೊಂಡ ಸಾಹಿತ್ಯ, ಸಂಗೀತ ಪರಂಪರೆ ಹರಿಹರ, ರಾಘವಾಂಕ, ಕುಮಾರವ್ಯಾಸರು, ತದನಂತರ ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಸಾಹಿತ್ಯ ,ಸಂಗೀತ, ಕಲೆ ಮೊದಲಾದವುಗಳಿಗೆ ರಾಜಾಶ್ರಯ ದೊರೆತಿತ್ತು. ವಿಜಯನಗರದ ಸಂಗಮ ವಂಶದ ಅರಸರುಗಳು "ವಿರುಪಾಕ್ಷ "ಎಂಬ ಕನ್ನಡದ ರಾಜಮುದ್ರೆ ಕನ್ನಡದ ಸಹಿಯಿಂದ ಕನ್ನಡದ ಹಿರಿಮೆ ಗರಿಮೆಯನ್ನು ಮೆರೆಸಿತ್ತು.. ಭಾರತದ ಚರಿತ್ರೆಯಲ್ಲಿ ಗುಪ್ತರ ಕಾಲವನ್ನು ಬಿಟ್ಟರೆ ವಿಜಯನಗರ ಸಾಮ್ರಾಜ್ಯದಲ್ಲೇ ಅತಿ ಹೆಚ್ಚು ಸಾಹಿತ್ಯ ರೂಪಗೊಂಡಿದ್ದು ಎನ್ನಲಾಗಿದೆ. ಶೈವ ಕೇಂದ್ರವಾಗಿದ್ದ ಹಂಪಿ ಮುಂದೆ ಶೈವ ವೀರಶೈವಗಳ ಸಂಗಮವಾಗಿ ನಂತರ ವೀರಶೈವ ಕವಿಗಳ ಸಾಹಿತ್ಯದ ನೆಲೆಯಾಗಿತ್ತು. ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರು ಹಂಪಿಯಲ್ಲಿ ನೆಲೆ ನಿಂತು ವಚನ ಸಾಹಿತ್ಯದ ಸಂಗ್ರಹ, ವಿಶ್ಲೇಷಣೆಯ ಕಾರ್ಯದಿಂದ ಸಾಹಿತ್ಯಕವಾಗಿ ಅತ್ಯಂತ ಮಹತ್ವದ ಕಾಲಘಟ್ಟವಾಗಿ ರೂಪುಗೊಂಡ ಚರಿತ್ರೆ ಇದೆ. ರತ್ನಾಕರವರ್ಣಿಯ ಭರತೇಶ ವೈಭವ, ಷಡಕ್ಷರ ಕವಿಯ ರಾಜಶೇಖರ ವಿಳಾಸ, ಕುಮಾರವ್ಯಾಸನ ಗದುಗಿನ ಭಾರತ, ಪ್ರಭುಲಿಂಗಲೀಲೆ, ವೀರಶೈವಾಮೃತ ಪುರಾಣ, ಲಿಂಗ ಲೀಲಾ ವಿಲಾಸ ಚರಿತ್ರೆ, ಶಿವಶರಣರ ರಗಳೆಗಳು ಮೊದಲಾವುಗಳು ವಿಜಯನಗರದ ಕನ್ನಡ ಸಾಹಿತ್ಯದ ಮೇರು ಕೃತಿಗಳೆಂದೇ ವಿದ್ವಾಂಸರಿಂದ ಗುರ್ತಿಸಲ್ಪಟ್ಟಿವೆ. ವಿದ್ಯಾರಣ್ಯರ ಸಂಗೀತಸಾರ, ವ್ಯಾಸ ತೀರ್ಥರು, ಪುರಂದಾಸರು, ಕನಕದಾಸರ ದಾಸ ಪರಂಪರೆ ಹಂಪಿಯಲ್ಲಿ ರೂಪಗೊಂಡಿತ್ತು.

ಪ್ರೌಢದೇವರಾಯನ ಆಸ್ಥಾನದಲ್ಲಿ ಮಂತ್ರಿಯಾಗಿದ್ದವ ಲಕ್ಕಣ್ಣ ದಂಡೇಶ. ಆದರೆ ಇವನು ಕೇವಲ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರೆ. ಇವನಿಗೆ ಮಹತ್ವ ದೊರೆಯುತ್ತಿತ್ತೋ ಇಲ್ಲವೊ ಗೊತ್ತಿಲ್ಲ. ಆದರೆ ರಾಜಕೀಯ ಕೆಲಸ ಕಾರ್ಯಗಳ ಜೊತೆ ಜೊತೆಗೆ ಕನ್ನಡ ಸಾಹಿತ್ಯ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳಿಂದಾಗಿ ಮತ್ತು ಕೃತಿಗಳಿಂದಾಗಿ ಇವ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷವಾಗಿ ಹಂಪಿಯಲ್ಲಿ ಅತ್ಯಂತ ಮಹತ್ವದ ಕವಿಯಾಗಿ ಗುರುತಿಸಿಕೊಂಡಿದ್ದಾನೆ.ಇವನು ರಚಿಸಿದ ಶಿವತತ್ವ ಚಿಂತಾಮಣಿ ಕನ್ನಡ ಸಾಹಿತ್ಯದ ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಕೃತಿ. ಈ ಕೃತಿಯ ಕವಿ ಲಕ್ಕಣ್ಣ ದಂಡೇಶ ಹಾಗೂ ಶಿವತತ್ವ ಚಿಂತಾಮಣಿ ಕುರಿತ ಒಂದು ಪರಿಚಯ.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
Scan For Digital Colourful
HAMPI TIMES E-paper

ವಿಜಯನಗರ ಸಾಮ್ರಾಜ್ಯದ ಸಂಗಮ ವಂಶದ ಪ್ರೌಢದೇವರಾಯ ಕರ್ನಾಟಕ ಅಷ್ಟೇ ಅಲ್ಲದೆ ಇಡೀ ದಕ್ಷಿಣ ಭಾರತದಲ್ಲಿ ಪ್ರಸಿದ್ಧಿ ಪಡೆದಿದ್ದ ಅರಸನಾಗಿದ್ದ. ಇವನು ಕರ್ನಾಟಕ ಗೋವಾ,ರಾಮೇಶ್ವರದವರಿಗೆ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದ್ದ. 1424 ರಿಂದ 1446 ರವರೆಗೆ ಆಡಳಿತ ನಡೆಸಿದ ವಿಜಯನಗರ ಸಾಮ್ರಾಜ್ಯದ ಆರಂಭದ ವಂಶದ ಪ್ರೌಢದೇವರಾಯ ಅತ್ಯಂತ ಸಮರ್ಥವಾದ ಅರಸನಾಗಿ ವಿಜಯನಗರ ಸಾಮ್ರಾಜ್ಯಕ್ಕೆ ಭದ್ರವಾದ ಒಂದು ಬುನಾದಿಯನ್ನು ಹಾಕಿ ಕೊಟ್ಟಿದ್ದವ. ಮುಂದೆ ಬಂದ ಅರಸರು ಇವನ ದಾರಿಯನ್ನೇ ಅನುಸರಿಸಿದರು ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ಸಾಮ್ರಾಜ್ಯ ಮೋಹನ್ನತವಾಗಿತ್ತು. ಕೃಷ್ಣದೇವರಾಯನಷ್ಟೇ ಪ್ರಸಿದ್ಧಿ ಪಡೆಯಲೇಬೇಕಾಗಿದ್ದ ಅರಸನೆಂದರೆ ಪ್ರೌಢದೇವರಾಯ .ಇವನು ಒಬ್ಬ ರಾಜನಾಗಿ ಅಷ್ಟೇ ಇರಲಿಲ್ಲ ಅವನು ಯುದ್ಧ ನಿಪುಣನು ಆಗಿದ್ದ. ಸರ್ವಧರ್ಮ ಸಮನ್ವಯನು ಆಗಿದ್ದ. ಸಾಹಿತ್ಯ ಸಂಗೀತಕ್ಕೆ ಅವನು ಅಪಾರವಾದ ಆಸಕ್ತಿಯಿಂದ ಸಾಹಿತ್ಯವನ್ನು ಪೋಷಿಸಿದ ಅಪರೂಪದ ಅರಸ. ಸ್ವತಃ ಕವಿಯಾಗಿ ಸಂಸ್ಕೃತದಲ್ಲಿ ಬ್ರಹ್ಮಸೂತ್ರ ವೃತ್ತಿಗಳನ್ನು ರಚಿಸಿದ್ದವ. ಇವನ ಕಾಲದಲ್ಲಿ ನೂರೊಂದು ವಿರಕ್ತರು ಹಂಪಿಗೆ ಬಂದು ವಚನ ಸಾಹಿತ್ಯವನ್ನು ಸಂಗ್ರಹಿಸಿದ್ದರು. ಇವನ ಆಸ್ಥಾನದಲ್ಲಿ ಜಕಣಾಚಾರ್ಯ, ಲಕ್ಕಣ್ಣ ದಂಡೇಶ ,ಮಹಾಲಿಂಗ ದೇವ, ಚಾಮರಸ, ಮಗ್ಗೆಯ ಮಾಯಿದೇವ, ಚಂದ್ರಶೇಖರ ಕವಿ ಹೀಗೆ ವೀರಶೈವ ಕವಿಗಳು ಹಾಗೂ ಕುಮಾರವ್ಯಾಸ ಆಯತವರ್ಮ ಕಲ್ಯಾಣ ಕೀರ್ತಿ ಭಾಸ್ಕರ್ ಕವಿ ಮೊದಲಾದ ವೀರಶೈವೇ ತರ ಕವಿಗಳು ಸಹ ಇವನ ಆಸ್ಥಾನದ ಕವಿಗಳಾಗಿದ್ದವರು.

ಇವರುಗಳಲ್ಲಿ ಲಕ್ಕಣ್ಣ ದಂಡೇಶ ಅತ್ಯಂತ ಪ್ರಬಲ ಮತ್ತು ಸಮರ್ಥ ಮಂತ್ರಿಯಾಗಿದ್ದ.



ಇಷ್ಟೇ ಅಲ್ಲ ಸಂಗಮ ವಂಶದ ಒಂದನೇ ದೇವರಾಯ, ವಿಜಯ ದೇವರಾಯ ಮತ್ತು ಮೂರನೇ ದೇವರಾಯ ಇವರ ಆಳ್ವಿಕೆಯಲ್ಲಿಯೂ ಲಕ್ಕಣ ದಂಡೇಶ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದನು. ಆದರೆ ಪ್ರೌಢದೇವರಾಯನ ಕಾಲದಲ್ಲಿ ತನ್ನ ಸಮರ್ಥ ಆಡಳಿತ ಹಾಗೂ ಇವನ ಆಸಕ್ತಿ ಮತ್ತು ಕಾಳಜಿಯಿಂದ ಸಾಹಿತ್ಯ ಕಲೆ ಸಂಸ್ಕೃತಿಗೆ ವಿಶೇಷವಾದ ಪ್ರೋತ್ಸಾಹ ದೊರೆತಿದ್ದು ವಿಶೇಷವಾಗಿದೆ. ಹೀಗಾಗಿಯೇ ಇವನು ಪ್ರಸಿದ್ಧಯಾದವ. ಪ್ರೌಢದೇವರಾಯ ಅರಸನ ಅತ್ಯಂತ ಆತ್ಮೀಯ ಸ್ನೇಹಿತ ಆಡಳಿತಗಾರನ ಆಗಿದ್ದ ಇವನು ನಂಬಿಕೆ ಮತ್ತು ವಿಶ್ವಾಸದಿಂದ ಪ್ರೌಢ ದೇವರಾಯನ ನಂಬಿಕಸ್ತ ಮಂತ್ರಿಯಾಗಿದ್ದ. ಹೀಗಾಗಿ ಪ್ರೌಢದೇವರಾಯ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿ ಅಳಿಯನನ್ನಾಗಿಯೂ ಸಹ ಮಾಡಿ ಕೊಂಡಿದ್ದ. ಪ್ರೌಢದೇವರಾಯನ ಆಡಳಿತದಲ್ಲಿ ಅತ್ಯಂತ ಪ್ರಬಲ ಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದವ. ಪ್ರೌಢದೇವರಾಯನ ಆಡಳಿತದಲ್ಲಿ ಲಕ್ಕಣ್ಣ ದಂಡೇಶ ತನ್ನ ಹೆಸರಿನಲ್ಲಿ ನಾಣ್ಯಗಳನ್ನು ಟಂಕಿಸುತ್ತಿದ್ದನ್ನು ನೋಡಿದರೆ ಇವನು ಅತ್ಯಂತ ಪ್ರಭಾವಶಾಲಿ ಮಂತ್ರಿಯಾಗಿದ್ದ ಎನ್ನುವುದು ಸ್ಪಷ್ಟವಾಗುತ್ತದೆ.

ಲಕ್ಕಣ್ಣ ದಂಡೀಶ ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲೂಕಿನ ವಿರೂಪಾಕ್ಷಪುರದಲ್ಲಿ ಜನಿಸಿ, ಅಲ್ಲಿನ ಪ್ರಸನ್ನ ವಿರೂಪಾಕ್ಷ ಸನ್ನಿಧಿಯಲ್ಲಿ ಬಾಲ್ಯವನ್ನು ಕಳೆದಿದ್ದವನು ,ನಂತರ ಶೈವ ಸಂಸ್ಕೃತಿಯ ಕೇಂದ್ರವಾಗಿದ್ದ ಹಂಪಿಯ ಪಂಪಾ ಕ್ಷೇತ್ರಕ್ಕೆ ಬಂದು ವಿಜಯನಗರದಲ್ಲಿ ರಾಜ್ಯ ಪ್ರತಿನಿಧಿಯಾಗಿ ದಂಡಾಧಿಪತಿಯಾಗಿ, ಸೈನಾಧಿಕಾರಿಯಾಗಿ, ಕವಿಯಾಗಿ ಪ್ರೌಢದೇವರಾಯನ ಪ್ರೀತಿ ವಿಶ್ವಾಸಕ್ಕೆ ಪಾತ್ರನಾಗಿದ್ದವನು, ಇವನು ವಿಶಿಷ್ಟ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ನಿರ್ವಹಿಸಿ ವಿಜಯನಗರ ಸಾಮ್ರಾಜ್ಯದಲ್ಲಿ ದಂಡಾಧೀಶನಾಗಿ ಅತ್ಯಂತ ನಿಷ್ಠೆಯಿಂದ ಕಾರ್ಯನಿರ್ವಹಿಸಿದ. ಮುಳಬಾಗಿಲು, ಬಾರ್ಕೂರು, ತಮಿಳುನಾಡಿನ ಹಲವು ಪ್ರಾಂತ್ಯಗಲ್ಲಿ ಮಾಂಡಲಿಕನಾಗಿ ಸೇನಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ. ನಾನುಕೇರಳದ ಕಿಲೋವನ್ ಪ್ರಾಂತವನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿ ಅಲ್ಲಿ ನೌಕ ಪಡೆಯನ್ನು ಕಟ್ಟಿದ ವ. ಅಲ್ಲದೆ ಸಿಂಹಳದೇಶದ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ಆರನೆಯ ಪರಾಕ್ರಮ ಬಾಹುವನ್ನು ಸೋಲಿಸಿವ ಅದನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸಿದವ.

ಇವನು ಮಂತ್ರಿಯಾಗಿ ರಾಜ್ಯವನ್ನು ನಡೆಸುವುದರ ಜೊತೆಗೆ ಧಾರ್ಮಿಕ, ಸಾಮಾಜಿಕಕಾರ್ಯಗಳನ್ನು, ಗುಡಿಗುಂಡಾರಗಳನ್ನು ಕಟ್ಟಿಸುವುದು, ಅನ್ನ ಛತ್ರಗಳನ್ನು ನಡೆಸುವುದು. ಕೆರೆ, ಕಾಲುವೆಗಳನ್ನು ನಿರ್ಮಿಸುವುದು ಇವನು ಜನಪರ ಆಡಳಿತ ನಡೆಸಿದ ಎನ್ನುವುದಕ್ಕೆ ಸಾಕ್ಷಿಯಾಗಿವೆ.

ಶಿವತತ್ವ ಚಿಂತಾಮಣಿ

ಲಕ್ಕಣ್ಣ ದಂಡೇಶನು ಶಿವ ತತ್ವ ಚಿಂತಾಮಣಿ ಕೃತಿಯಲ್ಲಿ ಶಿವಪಾರಮ್ಯವನ್ನು ಪ್ರಮುಖವಾಗಿ ನಿರೂಪಿಸಿದ್ದಾನೆ. ಶಿವಪಾರಮ್ಯವನ್ನು ನಿರೂಪಿಸುವ ಕಾವ್ಯಗಳಲ್ಲಿ ಲಕ್ಕಣ್ಣ ದಂಡಿಶನ ಶಿವ ತತ್ವ ಚಿಂತಾಮಣಿ ಪ್ರಮುಖವಾದದ್ದು ಎಂದು ವಿದ್ವಾಂಸರ ಅಭಿಪ್ರಾಯ.ಇದು 54 ಸಂಧಿಗಳಲ್ಲಿ 2221 ವರ್ಧಕ ಷಟ್ಪದಿಗಳನ್ನು ಒಳಗೊಂಡಿದೆ .ಇದು ಒಂದು ದೇಶಿ ಕಾವ್ಯವೆಂದೆ ಪ್ರಸಿದ್ಧಿ ಪಡೆದಿದೆ .ಪ್ರತಿಯೊಂದು ಸಂಧಿಯ ಕೊನೆಯಲ್ಲಿ ಚರಣಾಂಬುಜಕ್ಕೆ ಶರಣು ಎಂಬ ಪದ ಮುಕ್ತಾಯಗೊಳ್ಳುತ್ತದೆ .ವರ್ಧಕ ಷಟ್ಪದಿ ಛಂದಸ್ಸಿನಲ್ಲಿ ಈ ಕಾವ್ಯ ರಚನೆಯಾಗಿದೆ. ಇದರಲ್ಲಿ ಸಂಸ್ಕೃತ ಶ್ಲೋಕಗಳು ಮತ್ತು ಶರಣರ ವಚನಗಳು ಒಳಗೊಂಡಿವೆ .ಸಂಸ್ಕೃತ ಪುರಾಣಗಳಲ್ಲಿ ಒಳಗೊಂಡಿರುವ ಅನೇಕ ಪುರಾಣ ಅನೇಕ ಸಂಗತಿಗಳು ಶಿವ ತತ್ವ ಚಿಂತಾಮಣಿಯಲ್ಲಿ ಒಳಗೊಂಡಿವೆ. ಶಿವ ಪುರಾಣ ಸ್ಕಂದ ಪುರಾಣ ಬ್ರಹ್ಮಾಂಡ ಪುರಾಣ ಆದಿತ್ಯ ಪುರಾಣಗಳಲ್ಲಿ ಕಥಾಮೃತವನ್ನು ಕನ್ನಡಕ್ಕೆ ತಂದವನು. ಶಿವ ಪುರಾಣಗಳಲ್ಲಿ ಮೂಡಿಬಂದಿರುವ ಶಿವನ 25 ಲೀಲೆಗಳು ಈ ಕಾವ್ಯದ ಮೂಲಕ ಮೊಟ್ಟಮೊದಲ ಬಾರಿಗೆ ಕನ್ನಡಕ್ಕೆ ಬಂದಿವೆ.ಹೀಗಾಗಿ ಸಂಸ್ಕೃತದ ಶಿವ ಪುರಾಣಗಳಿಗಿರುವ ಮಹತ್ವ ಕನ್ನಡದ ಶಿವ ತತ್ವ ಚಿಂತಾಮಣಿಗೆ ಸಲ್ಲುತ್ತದೆ ಎನ್ನುತ್ತಾರೆ ವಿದ್ವಾಂಸರು. ವೀರಶೈವ ಧರ್ಮದ ಮೂಲ ತತ್ವಗಳಾದ ಷಟಸ್ಥಲ ಸಿದ್ಧಾಂತ ಪ್ರತಿಪಾದನೆ, ಅಷ್ಟಾವರಣ ಅಂಗಸ್ಥಲ ಲಿಂಗಸ್ಥಳಗಳ ಸೂಕ್ಷ್ಮ ವಿಭಜನೆ ಸಂಸಾರದ ವರ್ಣನೆ ಕ್ರಿಯಾ ವಿಶ್ರಾಂತಿ ಸ್ಥಳದ ವಿವರಣೆ ಶೈವ ಸಿದ್ಧಾಂತದ ಪ್ರತಿಪಾದನೆ ಶಿವ ತತ್ವ ಪಾರಮ್ಯನ್ನು ಹೀಗೆ ಹಲವಾರು ವಿಷಯಗಳು ಇಲ್ಲಿ ಚರ್ಚೆಗೆ ಒಳಪಟ್ಟಿವೆ.

ಶಿವ ತತ್ವ ಚಿಂತಾಮಣಿ ಧರ್ಮದ ವಿಷಯಗಳಜೊತೆಗೆ ಸಾಹಿತಿಕ ಗುಣಗಳನ್ನು ಒಳಗೊಂಡಿದೆ ಎನ್ನುತ್ತಾರೆ ವಿದ್ವಾಂಸರು. ವಾರ್ಧಕ ಷಟ್ಪದಿ ಛಂದಸ್ಸಿನಲ್ಲಿ ರೂಪಗೊಂಡ ಈ ಮಹಾಕಾವ್ಯ ಸಾಂಪ್ರದಾಯಿಕ ಅಷ್ಟದಶ ವರ್ಣನೆಗಳಿಗೆ ಕಟ್ಟು ಬೀಳದೆ ಕವಿ ವಿಶಿಷ್ಟ ರೀತಿಯಲ್ಲಿ 18 ಅಂಗಗಳನ್ನು ನಿರೂಪಿಸಿ ಕಥೆಯನ್ನು ವಿನೂತನ ಕ್ರಮದಲ್ಲಿ ಹೇಳಿದ್ದಾನೆ. ಧರ್ಮ ತತ್ವ ಸಿದ್ಧಾಂತ ಆಧ್ಯಾತ್ಮ ವಿಚಾರಗಳು ಸಹ ಒಂದೇ ಕಾವ್ಯದಲ್ಲಿ ಒಡಮೂಡಿವೆ. ಹಾಗಾಗಿ ಇದು ಒಂದು ಮಾದರಿ ಕೃತಿಯಾಗಿದೆ ಎನ್ನುತ್ತಾರೆ ವಿದ್ವಾಂಸರು ಮತ್ತೊಂದು ವಿಶೇಷವೆಂದರೆ ಸರಳವಾದ ಭಾಷಾಶೈಲಿಯನ್ನು ಕಾವ್ಯದಕ್ಕೂ ರಚಿಸಿದ್ದಾನೆ .ದಾಸೋಹ ಜಾರಿಗೆ ತಂದ ಬಸವಣ್ಣನ ಚರಿತ್ರೆಗೆ ಈ ಕಾವ್ಯದಲ್ಲಿ ನಾಲ್ಕು ಸಂಧಿಗಳನ್ನು ಮೀಸಲೇರಿಸಿದ್ದಾನೆ.ಬಿಜ್ಜಳನು ತನ್ನ ಮಗಳಾದ ನೀಲಾಂಬಿಕೆಯನ್ನು ಬಸವಣ್ಣನಿಗೆ ದಾರೆಯರದು ಕೊಡುವುದು .ಇವರಿಬ್ಬರಿಗೆ ಸಂಗಯ್ಯ ಎಂಬ ಸುಪುತ್ರ ಜನಿಸಿದ ವಿಷಯ. 60 ಪವಾಡಗಳ ವಿವರಣೆ ಹೀಗೆ ಬಸವಣ್ಣನ ಚರಿತ್ರೆಯನ್ನು ದಂಡೀಶ ನಿರೂಪಿಸಿದ್ದಾನೆ.

ಶಿವ ತತ್ವ ಚಿಂತಾಮಣಿಯಲ್ಲಿ ಒಂದನೇ ಸಂಧಿ ಶಿವ ತತ್ವ ಚಿಂತಾಮಣಿಯ ಕುರಿತು. ಸಂದಿ ಎರಡು ಉಮಾಮಹೇಶ್ವರ ಕಥೆ ಕುರಿತು ಗಿರಿಜಯ ಮದುವೆ. ತ್ರಿಪುರ ದಹನ ,ಶರಬಲೀಲೆ, ದಕ್ಷಿಣ ಮೂರ್ತಿಯ ಕಥೆ ,ಬಸವವನ ಪವಾಡಗಳು ,ಹೀಗೆ 54 ಸಂಧಿಗಳಲ್ಲಿ ಹಂಪಿಯ ನೆಲದಲ್ಲಿ ರಚನೆಗೊಂಡ ದೇಶಿ ಕೃತಿ ಶಿವ ತತ್ವ ಚಿಂತಾಮಣಿ. ಲಕ್ಕಣ್ಣ ದಂಡೀಶ ಹಂಪಿಯವ ಎನ್ನುವುದು ಹಂಪಿ ನೆಲದ ಹೆಮ್ಮೆ.

# ಸಂವಿಧಾನ ರಕ್ಷಣೆಯಾದರೆ ನಾವೆಲ್ಲರೂ ಸುರಕ್ಷಿತ

### ಸಂವಿಧಾನದ ವಿರುದ್ಧ ಇರುವವರನ್ನು ಕಿತ್ತು ಎಸೆಯಬೇಕು: ಮುಖ್ಯಮಂತ್ರಿ ಸಿದ್ದರಾಮಯ್ಯ | ಸಂವಿಧಾನದ ವಿರುದ್ಧದ ಅಪಪ್ರಚಾರವನ್ನು ಯಾರೂ ಸಹಿಸಬಾರದು ಸಾಮಾಜಿಕ ಅಸಮಾನತೆಯನ್ನು ಅಳಿಸಿಹಾಕುವುದು ಪ್ರತಿ ಸರ್ಕಾರದ ಜವಾಬ್ದಾರಿ | ಎರಡು ದಿನಗಳ ಕಾಲ ರಾಷ್ಟ್ರೀಯ ಏಕತೆ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ

**ಬೆಂಗಳೂರು:** ನಾವು ಸಂವಿಧಾನದ ಮಾಲೀಕರು. ಸಂವಿಧಾನ ಕಿತ್ತು ಎಸೆಯುವುದರಲ್ಲಿ ನಮ್ಮ ಆಸಕಿಯಿಲ್ಲ, ಸಂವಿಧಾನದ ವಿರುದ್ಧ ಇರುವವರನ್ನು ಕಿತ್ತು ಎಸೆಯಬೇಕು ಎಂಬ ಅಬ್ರಹಾಂ ಲಿಂಕನ್ ಅವರ ಮಾತುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉಲ್ಲೇಖಿಸಿದರು

ನಗರದ ಅರಮನೆ ಮೈದಾನದಲ್ಲಿ ಶನವಾರ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತಾ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ವಿರುದ್ಧ ಎರಡು ಅಪಪ್ರಚಾರಗಳು ನಡೆಯುತ್ತಿದೆ. ಸಂವಿಧಾನ ದಲಿತರ ಉದ್ಧಾರಕ್ಕಾಗಿದೆ ಹಾಗೂ ಸಾಮಾಜಿಕ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿಲ್ಲ ಎಂದು ಅಪಪ್ರಚಾರ ಮಾಡುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಸ್ಪಷ್ಟವಾಗಿ ಹೇಳುವುದರಿಂದ ಇದರ ವಿರುದ್ಧ ಇರುವ ಜನರು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಅರಿಯಬೇಕು. 1950 ಜನವರಿ 26 ರಿಂದ ಜಾರಿಗೆ ಬಂದಾಗಿನಿಂದ ಈ ಅಪಪ್ರಚಾರ ನಡೆಯುತ್ತಿದೆ. ಇದನ್ನು ನಾವು ಯಾರೂ ಸಹಿಸಬಾರದು. ಸಂವಿಧಾನ ರಕ್ಷಣೆಯಾದರೆ ನಾವೆಲ್ಲರೂ ಉಳಿಯುತ್ತೇವೆ. ಇಲ್ಲದಿದ್ದರೆ ಅಪಾಯಕ್ಕೆ ಸಿಲುಕುತ್ತೇವೆ ಎಂದರು.



ಸಾಮಾಜಿಕ ಅಸಮಾನತೆಯನ್ನು ಅಳಿಸಿಹಾಕುವುದು ಪ್ರತಿ ಸರ್ಕಾರದ ಜವಾಬ್ದಾರಿ ದೇಶದಲ್ಲಿ ಅಸಮಾನತೆಯನ್ನು ತೊಲಗಿಸಬೇಕು. ನಾವು ವೈರುಧ್ಯ ಇರುವ ಸಮಾಜಕ್ಕೆ ಕಾಲಿಡುತ್ತಿದ್ದೇವೆ. ಸಾಮಾಜಿಕ, ಆರ್ಥಿಕ ಅಸಮಾನತೆಯುಳ್ಳ ಸಮಾಜದಲ್ಲಿ ರಾಜಕೀಯ ಪ್ರಜಾಪ್ರಭುತ್ವ ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಾಗ ಮಾತ್ರ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಅಸಮಾನತೆಯಿಂದ ನರಳುವವರು ಪ್ರಜಾಪ್ರಭುತ್ವದ ಸೌಧವನ್ನು ಧ್ವಂಸ ಮಾಡುತ್ತಾರೆ ಎಂದು ಅಂಬೇಡ್ಕರ್ ಹೇಳಿದ್ದರು. ಸಾಮಾಜಿಕ ಅಸಮಾನತೆಯನ್ನು ಅಳಿಸಿಹಾಕುವುದು ಪ್ರತಿ ಸರ್ಕಾರದ ಜವಾಬ್ದಾರಿ. ಸಂವಿಧಾನ ಯಶಸ್ವಿಯಾಗಲು ಇದು ಯಾರ ಕೈಯಲ್ಲಿ ಇದೆ ಎನ್ನುವುದು ಮುಖ್ಯ ಸಂವಿಧಾನ, ಸಮಾನತೆ, ಮಾನವ ಸಮಾಜದ ನಿರ್ಮಾಣದ ಪರವಾಗಿರುವವರ ಕೈಯಲ್ಲಿದ್ದರೆ ಸಂವಿಧಾನ ಯಶಸ್ವಿಯಾಗುತ್ತದೆ. ಸಂವಿಧಾನಕ್ಕೆ ವಿರುದ್ಧವಾಗಿರುವವರ ಕೈಯಲ್ಲಿದ್ದರೆ ನಮಗೆ ಉಳಿಗಾಲವಿಲ್ಲ. ಸಂವಿಧಾನದ ಆಶಯಗಳು ಈಡೇರಲು ಸಂವಿಧಾನದ ಪರವಾಗಿರುವವರ ಕೈಯಲ್ಲಿ ಅಧಿಕಾರವಿರಬೇಕು ಎಂದರು.

ಸಂವಿಧಾನ ಜಾರಿಯಾದ ಅಮೃತ ಮಹೋತ್ಸವ ಆಚರಣೆಯ ಅಂಗವಾಗಿ ಸಂವಿಧಾನದ ಪೀಠಿಕೆ, ಆಶಯಗಳನ್ನು ರಾಜ್ಯದ ಜನರು ಅರ್ಥ ಮಾಡಿಕೊಳ್ಳಬೇಕೆಂದು 2024 ಜನವರಿ 26 ರಿಂದ ರಾಜ್ಯದಲ್ಲಿ ಸಂವಿಧಾನ ಜಾಥಾ ಹಮ್ಮಿಕೊಳ್ಳಲಾಗಿದೆ. 31 ಜಿಲ್ಲೆಗಳಲ್ಲಿ ಸಂವಿಧಾನದ ಉದ್ದೇಶ, ಅಗತ್ಯ, ಅನಿವಾರ್ಯತೆಯನ್ನು ಜನರಿಗೆ ತಿಳಿಸುವ ಕೆಲಸ ಮಾಡಲಾಗಿದೆ. ಎರಡು ದಿನಗಳ ಕಾಲ ರಾಷ್ಟ್ರೀಯ ಏಕತೆ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

**ಶ್ರೇಷ್ಠ ಸಂವಿಧಾನ:** ಸಂವಿಧಾನವನ್ನು ಓದುವಂತೆ ಸಲಹೆ ನೀಡಿದ ಮುಖ್ಯಮಂತ್ರಿಗಳು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಅನೇಕ ದೇಶಗಳ ಸಂವಿಧಾನ ಓದಿ ಅರ್ಥ ಮಾಡಿಕೊಂಡು ದೇಶದ ಸಮಸ್ಯೆಗಳಿಗೆ ಅಪರಿಹಾರ ಸೂಚಿಸುವ ರೀತಿಯಲ್ಲಿ ಸಂವಿಧಾನ ರಚಿಸಿದ್ದಾರೆ. ಭಾರತದ ಸಂವಿಧಾನ ಅತ್ಯಂತ ಶ್ರೇಷ್ಠ ಸಂವಿಧಾನ ಎಂದರು.

ಇದೇ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಅತ್ಯುತ್ತಮ ಚಟುವಟಿಕೆ ಆಯೋಜಿಸಿದ್ದ ತುಮಕೂರು ಜಿಲ್ಲೆ, ದಾವಣಗೆರೆ, ಮೈಸೂರು, ಕೊಡಗು, ಬಳ್ಳಾರಿ ಜಿಲ್ಲೆಗಳಿಗೆ ಬಹುಮಾನ ಹಾಗೂ ನೆನಪಿನ ಕಾಣಿಕೆ ವಿತರಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಮಾಜ ಕಲ್ಯಾಣ ಸಚಿವ ಡಾ: ಹೆಚ್.ಸಿ.ಮಹದೇವಪ್ಪ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ , ಸಚಿವ ಪ್ರಿಯಾಂಕ ಖರ್ಗೆ ಶಾಸಕ ಸೋಮಶೇಖರ್,ಅಪರ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಉಪಸ್ಥಿತರಿದ್ದರು

**ಕವಿ ಮನಸು**

ಅಮ್ಮನ ಸೀರೆ
***************
ಅಮ್ಮ.. ಅಜ್ಜಿ..
ಅತ್ತೆ.. ಸೊಸೆ..
ಸತಿ..ಸುತೆ..
ಸಹೋಧರಿಯರ
ಮೂಲ ಉಡುಗೆಯೇ ಸೀರೆ

ಸೀರೆ ಉಡುಪೇ..
ಮೊದಲು ಮಾತೆ ಸ್ವರೂಪವು
ಸೀರೆ ಉಡುಗೆಯೇ..
ಸ್ತ್ರೀಗೆ ದೇಶಿ ಸಂಸ್ಕೃತಿಯು

ತಾಯಿಯು ಸೀರೆ
ಸೆರಗಲಿ ಕಂದನ
ಅವಿತಿಟ್ಟು ಅಪ್ಪಿ..
ಎದೆ ಹಾಲ ಉಣಿಸೋ
ನಾಕ ಧರೆಗೆ ಮಿಗಿಲೆಲ್ಲಿ..!

ಸಂತೆಯ ನಡಿಗೆಯಲಿ
ಜನ ಗದ್ದಲ ನಡುವೆಯಲಿ
ಕಂದನ ಜೊತೆಯಲಿ
ಸರಕು ದಿನಸಿ ಹೊತ್ತ
ಮಾತೆಯ ಸೆರಗನು
ಹಿಡಿದು ಸಾಗುವ
ಪುಟ್ಟ ಕಂದಗೆ
ತಾಯಿ ಸೆರಗೇ ಭರವಸೆಯು

ಆಡಿ ಓಡೋಡಿ..
ಬಂದ ಕಂದನ
ಮುಖ ಮೈ ವರೆಸುವ
ತಾಯಿಯ ಸೀರೆ ಸೆರಗು
ಕಂದಗೆ ರೇಷ್ಮೆ ಸೋಪಾನವು

ಅಪ್ಪ ಸಿಟ್ಟಿನಲಿ..
ಗದರಿಸಿ ಹೊಡೆಯುತಿರೇ
ತಾಯಿಯ ಸೀರೆ ಸೆರಗ
ಶ್ರೀರಕ್ಷೆಗೆ ಮಿಗಿಲಿಲ್ಲವು

– ಸೋ.ದಾ.ವಿರೂಪಾಕ್ಷಗೌಡ
ಹೊಸಪೇಟೆ ವಿಜಯನಗರ







**ಮಕ್ಕಳು ಅರಸರಾಗಬೇಕೆ?**

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬರದಲ್ಲೂ ಪರೀಕ್ಷಾ ಶುಲ್ಕ ಬರೆ

## ಶುಲ್ಕ ಕಡಿತಗೊಳಿಸಿ, ಪಾವತಿಗೆ ಅವಧಿ ವಿಸ್ತರಿಸಿ

**ಎಸ್ಸಿ, ಎಸ್ಟಿ ಹಾಗೂ ಒಬಿಸಿ ವಿದ್ಯಾರ್ಥಿಗಳಿಗೆ 250 ರಿಂದ ಏಕಾಏಕಿ 1200 ರೂಗಳಿಗೆ ಶುಲ್ಕ ಹೆಚ್ಚಳಕ್ಕೆ ಆಕ್ರೋಶ**



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಹೆಚ್ಚಳವಾಗಿದ್ದು ಇಲ್ಲಿಯ ಎಸ್.ಎಫ್.ಐ ನೇತೃತ್ವದಲ್ಲಿ ಕಾಲೇಜ್ ವಿದ್ಯಾರ್ಥಿಗಳು ಖಂಡಿಸಿ ಮತ್ತು ಶುಲ್ಕ ಕಟ್ಟಿಸಿಕೊಳ್ಳುವ ನಿಗದಿತ ದಿನಾಂಕವನ್ನು ಮುಂದೂಡುವಂತೆ ಆಗ್ರಹಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನ ಪ್ರಾಂಶುಪಾಲರಾದ ಕೆ.ವೆಂಕಟೇಶ್ ಅವರಿಗೆ ಮನವಿ ಸಲ್ಲಿಸಿದರು.

ಎಸ್‌ಎಫ್‌ಐ ಸಂಘಟನೆ ಜಿಲ್ಲಾ ಘಟಕದ ಅಧ್ಯಕ್ಷ ದೊಡ್ಡಬಸವರಾಜ ಮಾತನಾಡಿ, ರಾಜ್ಯದ ಇತರ ಕಡೆಗಿಂತ ಕಲ್ಯಾಣ ಕರ್ನಾಟಕ ಭಾಗದಲ್ಲಿ, ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಬಹುತೇಕ ಕಡಿಮೆಯಾಗುತ್ತಿದ್ದು, ಇದಕ್ಕೆ ಬಡತನ, ಆರ್ಥಿಕ ಸಮಸ್ಯೆ, ಕುಟುಂಬ ನಿರ್ವಹಣೆಯಂತಹ ನಾನಾ ಸಮಸ್ಯೆಗಳಿಂದ ಪದವಿ ಕೋರ್ಸ್‌ಗಳನ್ನು ಅರ್ಧಕ್ಕೆ ಬಿಟ್ಟು ನಗರಗಳತ್ತ ತೆರಳುವ ಯುವಕರ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಬರಗಾಲದಿಂದ ಕೃಷಿ ಅವಲಂಬಿತರು ಮಳೆ ಬೆಳೆ ಇಲ್ಲದೆ ಇನ್ನಷ್ಟು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲೂ ಪದವಿ ದಾಖಲಾತಿ ಮಾಡಿಸಿರುವ ವಿದ್ಯಾರ್ಥಿಗಳಿಗೆ, ಪರೀಕ್ಷಾ ಶುಲ್ಕ ಹೆಚ್ಚಳ ಮಾಡಿರುವುದು ಆತಂಕ ಮೂಡಿಸಿದೆ. ಎಸ್ಸಿ, ಎಸ್ಟಿ ಹಾಗೂ ಓಬಿಸಿ ವಿದ್ಯಾರ್ಥಿಗಳಿಗೆ 150 ರಿಂದ 250 ರವರೆಗಿದ್ದ ಶುಲ್ಕವನ್ನು ಏಕಾಏಕಿ 1200 ರೂಗಳಿಗೆ ಹೆಚ್ಚಳ ಮಾಡಿರುವುದು ಸಮಸ್ಯೆಯಾಗಿದೆ. ಕೂಡಲೇ ಶುಲ್ಕವನ್ನು ಕಡಿಮೆ ಮಾಡಿ, ಫೆ.29 ರೊಳಗೆ ಪಾವತಿಸಲು ನೀಡಿರುವ ಕೊನೆ ದಿನಾಂಕವನ್ನು ಮುಂದೂ ಡಬೇಕು ಎಂದು ಒತ್ತಾಯಿಸಿದರು.

ತಾಲೂಕು ಅಧ್ಯಕ್ಷ ಜಯಸೂರ್ಯ ಮಾತನಾಡಿ, ಕಳೆದ ಎರಡು ವರ್ಷದ ಹಿಂದೆ ಇದ್ದ ಪರೀಕ್ಷಾ ಶುಲ್ಕವನ್ನು ಮುಂದುವರಿಸಬೇಕು. ವಿವಿಯು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರಿತು ಸ್ಪಂದಿಸಬೇಕು ಎಂದರು. ಸಂಘಟನೆಯ ರಾಜ್ಯ ಪದಾಧಿಕಾರಿ ಗಳಾದ ಶಿವರೆಡ್ಡಿ, ತಾಲೂಕು ಘಟಕದ ಹುಲುಗಪ್ಪ, ಮಾರುತಿ, ಮಂಜುನಾಥ, ಬಿಂದು, ಅರುಣಾ, ನಿಸರ್ಗ, ಗಂಗಮ್ಮ, ಕವಿತಾ, ರಾಜೀವ, ಉದಯ್ ಇತರರಿದ್ದರು.

# ಮಾರ್ಚ್ 1ರಿಂದ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ

## ಖಜಾನೆ ನಿರ್ವಹಣೆಗೆ ತ್ರಿಸದಸ್ಯ ಸಮಿತಿ ನೇಮಿಸಿ ಜಿಲ್ಲಾಧಿಕಾರಿಗಳ ಆದೇಶ

■ **ಹಂಪಿ ಟೈಮ್ಸ್ ಹೊಸಪೇಟೆ**

ಮಾರ್ಚ್ 1 ರಿಂದ 22ರವರೆಗೆ ನಡೆಯುವ ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ–1ರ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತವಾಗಿ ನಿರ್ವಹಣೆ ಮಾಡಲು "ಕರ್ನಾಟಕ ಸೆಕ್ಯೂರ್ ಎಕ್ಸಾಮಿನೇಷನ್ ಸಿಸ್ಟಮ್"ನ್ನು ಅನುಷ್ಠಾನಗೊಳಿಸಿ, ಖಜಾನೆ ನಿರ್ವಹಣೆಗೆ 'ತ್ರಿ–ಸದಸ್ಯ ಸಮಿತಿ' ಅಧಿಕಾರಿಗಳನ್ನು ನೇಮೀಸಲಾಗಿದೆ. ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆ–1ರ ಪ್ರಶ್ನೆ ಪತ್ರಿಕೆಗಳನ್ನು ಸುರಕ್ಷಿತ ಮತ್ತು ಸುಭದ್ರ ರೀತಿಯಲ್ಲಿ ನಿರ್ವಹಣೆ ಮಾಡಲು ಪದವಿ ಪೂರ್ವ ಪರೀಕ್ಷೆಗಳಿಗೆ "ಕರ್ನಾಟಕ ಸೆಕ್ಯೂರ್ ಎಕ್ಸಾಮಿನೇಷನ್ ಸಿಸ್ಟಮ್" ಮಾರ್ಚ್–2017 ರಿಂದ ಅನುಷ್ಠಾನಗೊಂಡಿರುವುದರಿಂದ ಪದವಿ ಪೂರ್ವ ಶಿಕ್ಷಣ ಇಲಾಖೆ ಮತ್ತು ಖಜಾನೆ ಇಲಾಖೆಗಳ ನಿಯಂತ್ರಣದಲ್ಲಿರುವ ಪ್ರಶ್ನೆ ಪತ್ರಿಕೆಗಳ ಆಡಳಿತ ಮತ್ತು ನಿರ್ವಹಣೆಯಲ್ಲಿ ಮೂರು ವಿವಿಧ ಭದ್ರತೆ ನಿಗಾ ಹಾಗೂ ಸುರಕ್ಷತೆಯನ್ನು ಒದಗಿಸುವುದನ್ನು ಈ ವ್ಯವಸ್ಥೆ ಒಳಗೊಂಡಿರುತ್ತದೆ. "ಕರ್ನಾಟಕ ಸೆಕ್ಯೂರ್ ಎಕ್ಸಾಮಿನೇಷನ್ ಸಿಸ್ಟಮ್"ನ್ನು ಅನುಷ್ಠಾನಗೊಳಿಸುವಲ್ಲಿ ಹೊಸಪೇಟೆಯಲ್ಲಿರುವ ಜಿಲ್ಲಾ ಖಜಾನೆಯಲ್ಲಿ ಸಿಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಗೌಪ್ಯ ವಸ್ತುಗಳ ಠೇವಣಿ ಹಾಗೂ ವಿತರಣೆಯ ಪ್ರಕ್ರಿಯೆಯನ್ನು ಸಿಸಿ ಟಿ.ವಿ ವೀಕ್ಷಣಾ ಕ್ಷೇತ್ರದಲ್ಲಿ ನಡೆಸಲಾಗುವುದು. ಈ ಪ್ರಕ್ರಿಯೆಯಲ್ಲಿ ಜಿಲ್ಲಾ ಖಜಾನೆ, ಅಪರ ಜಿಲ್ಲಾಧಿಕಾರಿಗಳು, ಉಪನಿರ್ದೇಶಕರು ಜಿಲ್ಲಾ ಖಜಾನೆ ಮತ್ತು ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಹುದ್ದೆಯು ವಿಜಯನಗರ ಜಿಲ್ಲೆಗೆ ಸೃಜನೆಯಾಗದೇ ಇರುವ ಕಾರಣ ಉಪನಿರ್ದೇಶಕರ ಕಾರ್ಯವನ್ನು ನಿರ್ವಹಿಸಲು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿ ಕೆ.ಬಿ.ಎಂ. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರನ್ನೊಳಗೊಂಡ ತ್ರಿ–ಸದಸ್ಯ ಪ್ರಶ್ನೆ ಪತ್ರಿಕಾ ಪಾಲಕರ ಸಮಿತಿಯನ್ನು ರಚಿಸಲಾಗಿದೆ.

ಪರೀಕ್ಷಾ ಗೌಪ್ಯ ವಸ್ತುಗಳನ್ನು ಖಜಾನೆಯಿಂದ ಸ್ವೀಕರಿಸಿ, ನಿಗದಿ ಪಡಿಸಲಾದ ಪರೀಕ್ಷಾ ಕೇಂದ್ರಗಳಿಗೆ ವಿತರಿಸಲು ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರನ್ನೊಳಗೊಂಡೆ ಮಾರ್ಗಾಧಿಕಾರಿಗಳ ತಂಡಗಳನ್ನು ರಚಿಸಲಾಗಿದೆ. ಈ ತ್ರಿ–ಸದಸ್ಯ ತಂಡದವರು ಗೌಪ್ಯ ಬಂಡಲ್‌ಗಳನ್ನು ಜಿಲ್ಲಾ ಖಜಾನೆ ಹೊಸಪೇಟೆಯಲ್ಲಿ ಠೇವಣಿಸುವಾಗ ಹಾಗೂ ವಿತರಿಸುವಾಗ ಖುದ್ದಾಗಿ ಹಾಜರಿದ್ದು, ಪ್ರತಿ ಮಾರ್ಗಗಳಿಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳ ಪ್ರಶ್ನೆ ಪತ್ರಿಕೆ ಬಾಕ್ಸ್‌ಗಳನ್ನು ಪರಿಶೀಲಿಸಿ ದೃಢೀಕರಿಸಿ ಠೇವಣಿಸುವುದು ಹಾಗೂ ಪರೀಕ್ಷಾ ವೇಳಾ ಪಟ್ಟಿಯಂತೆ ಮಾರ್ಗಾಧಿಕಾರಿಗಳ ತಂಡಕ್ಕೆ ವಿತರಿಸಬೇಕಾಗಿರುತ್ತದೆ. ಇದರನ್ವಯತ್ರಿ–ಸದಸ್ಯ ಪ್ರಶ್ನೆ ಪತ್ರಿಕಾ ಪಾಲಕರ ಸಮಿತಿಯನ್ನು ರಚಿಸಿ ನಿಯೋಜನೆ ಮಾಡಿದ ಅಧಿಕಾರಿಗಳಾದ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ. ಮೊ.ಸಂ: 9844488360, ಜಿಲ್ಲಾ ಖಜಾನೆ ಇಲಾಖೆಯ ಉಪನಿರ್ದೇಶಕರಾದ ರಾಮಪ್ರಸಾದ್ ಮೊ.ಸಂ: 9845425828, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬಾಚಿಗೊಂಡನಹಳ್ಳಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ನಾಗಲಿಂಗಸ್ವಾಮಿ ಕೆ.ಬಿ.ಎಂ ಮೊ.ಸಂ: 9480939378, ಇವರನ್ನು ಜಿಲ್ಲಾ ಖಜಾನೆ ತ್ರಿ ಸದಸ್ಯರನ್ನಾಗಿ ನೇಮಿಸಲಾಗಿದೆ.

# ಕನಕಗಿರಿ ಉತ್ಸವ–2024 ಸಿದ್ಧತೆ ಜೋರು

**ಉತ್ಸವಕ್ಕೆ ಫೆ.28ರಂದು ಅಧಿಕೃತ ಚಾಲನೆ | ಮಾರ್ಚ 1 ರಂದು ಮ್ಯಾರಾಥಾನ್ ಮತ್ತು ಮಧ್ಯಾಹ್ನ ಕ್ರಿಕೆಟ್ ಪಂದ್ಯಾವಳಿ**
**ಮಾ.2 ಮತ್ತು ಮಾ.3ರಂದು ಉತ್ಸವದ ಕಾರ್ಯಕ್ರಮಗಳು ನಡೆಯಲಿವೆ : ಸಚಿವ ಶಿವರಾಜ ತಂಗಡಗಿ**



■ **ಹಂಪಿ ಟೈಮ್ಸ್ ಕೊಪ್ಪಳ**

ಕನಕಗಿರಿ ಉತ್ಸವ 2024ರ ಸಿದ್ಧತೆಗಳು ಜಿಲ್ಲಾ ಉಸ್ತುವಾರಿ ಸಚಿವರ ತವರು ಕ್ಷೇತ್ರ ಕನಕಗಿರಿಯಲ್ಲಿ ಭರ್ಜರಿಯಾಗಿ ನಡೆದಿವೆ.

ಫೆ.24ರಂದು ತವರು ಕ್ಷೇತ್ರ ಕನಕಗಿರಿ ಆಗಮಿಸಿದ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ ಅವರು ಉತ್ಸವ ಮೈದಾನ ಸೇರಿದಂತೆ ವಿವಿಧೆಡೆ ಸಂಚರಿಸಿ ಸಿದ್ಧತೆಯನ್ನು ಪರಿಶೀಲಿಸಿದರು.

ಮೊದಲಿಗೆ ಉತ್ಸವದ ಮೈದಾನಕ್ಕೆ ತೆರಳಿ ಅಲ್ಲಿ ಮುಖ್ಯ ವೇದಿಕೆಯ ನಿರ್ಮಾಣದ ಸಿದ್ಧತೆಯ ಮಾಹಿತಿ ಪಡೆದರು. ಮುಖ್ಯ ವೇದಿಕೆಯ ನಿರ್ಮಾಣ ಕಾರ್ಯವನ್ನು ಕೂಡಲೇ ಆರಂಭಿಸಲು ಹಾಗೂ ಧೂಳು ಆಗದಂತೆ ಕಾಲಕಾಲಕ್ಕೆ ನೀರುಣಿಸಿ ಮೈದಾನವನ್ನು ಅಚ್ಚುಕಟ್ಟಾಗಿ ಸಿದ್ಧಗೊಳಿಸಲು ಸೂಚನೆ ನೀಡಿದರು.

ಬಳಿಕ ಎಪಿಎಂಸಿ ಆವರಣದಲ್ಲಿನ ಕಲ್ಯಾಣ ಮಂಟಪದಲ್ಲಿ ಉತ್ಸವದ ವಿವಿಧ ಸಮಿತಿಗಳ ಅಧ್ಯಕ್ಷರು ಮತ್ತು ಕನಕಗಿರಿ ಪಟ್ಟಣದ ನಾಗರಿಕರು ಮತ್ತು ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದರು.

ಇದೆ ವೇಳೆ ಸಚಿವರು ವಿವಿಧ ಸಮಿತಿಗಳ ಸಿದ್ಧತೆಯ ಬಗ್ಗೆ ಆಯಾ ಸಮಿತಿಗಳ ಅಧ್ಯಕ್ಷರಿಂದ ಸಮಗ್ರ ಮಾಹಿತಿ ಪಡೆದರು. ಉತ್ಸವಕ್ಕೆ ದಿನ ನಿಗದಿಯಾದ ದಿನದಿಂದ ಇಲ್ಲಿವರೆಗಿನ ಸಿದ್ಧತೆ ಬಗ್ಗೆ ಆಯಾ ಸಮಿತಿಗಳಿಂದ ನಡೆದ ನಾನಾ ಕಾರ್ಯಗಳ ಬಗ್ಗೆ ಅಧಿಕಾರಿಗಳು ಸಚಿವರಿಗೆ ಮಾಹಿತಿ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಉತ್ಸವ ಹಿನ್ನೆಲೆಯಲ್ಲಿ ಈಗಾಗಲೇ ನಿರ್ಣಯಿಸಿದಂತೆ ನಾನಾ ಕ್ರೀಡಾಕೂಟಗಳಿಗೆ ಫೆ.28ರಂದು ಅಧಿಕೃತವಾಗಿ ಚಾಲನೆ ನೀಡಲಾಗುವುದು. ಮಾರ್ಚ 1ರಂದು ಬೆಳಗ್ಗೆ ಮ್ಯಾರಾಥಾನ್ ಮತ್ತು ಮಧ್ಯಾಹ್ನ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಮಾ.2 ಮತ್ತು ಮಾ.3ರಂದು ಉತ್ಸವದ ಕಾರ್ಯಕ್ರಮಗಳು ಪೂರ್ವನಿಗದಿಯಂತೆ ನಡೆಯಲಿವೆ ಎಂದು ತಿಳಿಸಿದರು. ಕವಿಗೋಷ್ಠಿ ಮತ್ತು ವಿಚಾರಗೋಷ್ಠಿ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ನಿಗದಿಪಡಿಸಿದ ಅವಧಿಯಲ್ಲಿ ನಡೆಯುವಂತೆ ನೋಡಿಕೊಳ್ಳಲು ವೇದಿಕೆಯ ಸಮಿತಿಯ ಅಧಿಕಾರಿಗಳಿಗೆ ಸೂಚಿಸಿದರು. ಮೆರವಣಿಗೆಯು ಈ ಬಾರಿ ವಿಶೇಷತೆಯಿಂದ ನಡೆಯಬೇಕು. ಇದಕ್ಕೆ ಸಾರ್ವಜನಿಕರು ಸಹಕರಿಸಿ ಹಬ್ಬದಂತೆ ಆಚರಣೆ ಮಾಡಬೇಕು ಎಂದು ಮನವಿ ಮಾಡಿದರು.

ಸಾರ್ವಜನಿಕರಲ್ಲಿ ಮನವಿ: ಕನಕಗಿರಿ ಉತ್ಸವ ಬರೀ ಅಧಿಕಾರಿಗಳ ಉತ್ಸವ ಆಗಬಾರದು. ಇದರಲ್ಲಿ ಕನಕಗಿರಿ ಸೇರಿದಂತೆ ಜಿಲ್ಲೆಯ ಎಲ್ಲಾ ಜನರು ಸಕ್ರಿಯ ಭಾಗಿಯಾಗಬೇಕು. ಕಾರ್ಯಕ್ರಮದ ಯಶಸ್ಸಿಗೆ ಎಲ್ಲರೂ ಸಹಕರಿಸಬೇಕು. ಮಾರ್ಚ 2 ಮತ್ತು ಮಾರ್ಚ 3ರಂದು ಕನಕಗಿರಿ ಪಟ್ಟಣ ಸೇರಿದಂತೆ ಕ್ಷೇತ್ರದಲ್ಲಿ ಹಬ್ಬದ ಸಂಭ್ರಮ ಎಲ್ಲೆಡೆ ಕಾಣಬೇಕು. ಇದು ನಮ್ಮೆಲ್ಲರ ಉತ್ಸವವಾಗಿದೆ. ಯಾವುದೇ ರೀತಿಯ ಬೇಧ–ಭಾವ ಮಾಡದೇ ತಾರತಮ್ಯ ಮಾಡದೇ ಎಲ್ಲರೂ ಉತ್ಸವದಲ್ಲಿ ಭಾಗಿಯಾಗಿ ಇದು ಜನೋತ್ಸವವಾಗಲು ಸಹಕಾರ ನೀಡಬೇಕು ಎಂದು ಸಚಿವರು ಇದೆ ವೇಳೆ ಕನಕಗಿರಿ ಕ್ಷೇತ್ರದ ಸಾರ್ವಜನಿಕರಲ್ಲಿ ಮತ್ತು ಜಿಲ್ಲೆಯ ಜನರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ತಹಸೀಲ್ದಾರರಾದ ವಿಶ್ವನಾಥ ಮುರಡಿ, ತಾಪಂ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ ಬಿ ಕಂದಕೂರ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ದತ್ತಾತ್ರೇಯ ಹೆಗಡೆ, ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳಾದ ರುದ್ರೇಶಪ್ಪ ಟಿ.ಎಸ್., ಕೃಷ್ಣ ಉಕ್ಕುಂದ, ಚಿದಾನಂದ ಕುರಿ, ಸುಧಾಕರ ಮಾನೆ, ನಾಗರಾಜ ಕೆ., ಗವಿಸಿದ್ದಪ್ಪ ಹೊಸಮನಿ, ಮುಖಂಡರಾದ ಕೆ.ಗಂಗಾಧರ ಸ್ವಾಮಿ, ವೀರೇಶಪ್ಪ ಸಮಗಂಡಿ, ಶ್ರೀನಿವಾಸ ರೆಡ್ಡಿ, ಇತರರು ಇದ್ದರು.

# ಹಂಪಿ ರಥಬೀದಿಯುದ್ದಕ್ಕೂ ಗತವೈಭವದ ಚಿತ್ರಗಳು ರಾರಾಜಿಸಲಿ

## ಹಂಪಿ ಪ್ರವಾಸದ ಅನುಭವ

ನಮ್ಮ ಹಂಪಿ ನಮ್ಮ ಹೆಮ್ಮೆ, ನಾನು ಹುಟ್ಟಿ ಬೆಳೆದ ಊರು ಹೊಸಪೇಟೆಯಾದ ಕಾರಣ ಬಾಲ್ಯದ 80 ದಶಕದಿಂದ ಹಂಪಿಗೆ ಪ್ರವಾಸ ಎಷ್ಟೋ ಬಾರಿ ಹೋಗಿದ್ದೆನೆಂಬುದು ಲೆಕ್ಕವಿಲ್ಲ.

ನಾವು ಹೊಸಪೇಟೆಯಿಂದ ಬಾಲ್ಯದ ಗೆಳತಿಯರು ಬುತ್ತಿ ಕಟ್ಟಿಕೊಂಡು ಹಂಪಿಗೆ ಹೋಗುತ್ತದ್ದೇವು. ಬೆಳಿಗ್ಗೆ 9.00 ಗಂಟೆಗೆ ಹೋದರೆ ಸಂಜೆ 6 ಗಂಟೆಗೆ ಬರುತ್ತಿದ್ದೇವು. ಹೇಮಕೂಟದ ಹತ್ತಿರ ಬಸ್‌ಸ್ಟಾಪ್. ಆದರೆ ಅಲ್ಲಿ ಸಾಸುವೆಕಾಳು ಗಣಪ, ಕಡ್ಲೆಕಾಳು ಗಣಪ ಎಲ್ಲಾ ನೋಡಿಕೊಂಡು ಕೆಳಗೆ ವಿರೂಪಾಕ್ಷೇಶ್ವರ ದೇವಸ್ಥಾನದ ದರ್ಶನ ಮಾಡಿಕೊಂಡು ಅಲ್ಲಿ ಉಲ್ಟಾ ಗೋಪುರನೋಡುವುದೇಒಂದುಆಶ್ಚರ್ಯಕರವಾಗಿತ್ತು. ಅದು ಹೇಗೆ ಕಾಣಿಸಿಕೊಳ್ಳುತ್ತದೆ. ನಂತರ ಅಲ್ಲಿಂದ ರಾಮಲಕ್ಷ್ಮಣರ ದೇವಸ್ಥಾನದಿಂದ ನಡೆದುಕೊಂಡು ಪುರಂದರ ದಾಸರ ಮಂಟಪಕ್ಕೆ ಹೋಗುತ್ತಿದ್ದೇವು. ಪುರಂದರ ದಾಸರ ಮಂಟಪಕ್ಕೆ ಹೋಗುವ ಮಧ್ಯೆ ದಾರಿಯಲ್ಲಿ ಕಲ್ಲುಬಂಡೆಗಳ ಮೇಲೆ 'ಸೀತೆಸೆರಗು' ಉದ್ದನೆಯ ಸೆರಗಿನ ತರಹ ಇರುವುದನ್ನು ನೋಡಿ ರಾವಣ ಸೀತೆಯ ಸೆರಗು ಎಳೆದಿದ್ದು ಎಂದು ಹಿರಿಯರು ಹೇಳುತ್ತಿದ್ದರು. ಪುರಂದರ ದಾಸರ ಮಂಟಪದ ಹತ್ತಿರ ಹರಿಯುವ ತುಂಗಭದ್ರಾ ನದಿಯಲ್ಲಿ ನೀರೆರುಚುವ ಆಟವಾಡಿ ಸಂತೋಷ ಪಡುತ್ತಿದ್ದೇವು. ಅಲ್ಲಿ ಮಂಟಪದಲ್ಲಿ ಎಲ್ಲರೂ ತಂದ ಬುತ್ತಿಯನ್ನು ಬಿಚ್ಚಿ ಪರಸ್ಪರ ಹಂಚಿಕೊಂಡು ಊಟ ಮಾಡುತ್ತಿದ್ದೇವು.

ಅಲ್ಲಿಂದ ದಿನ್ನೆಯ ಮೇಲೆ ಒಂದು ಕಂಬದಲ್ಲಿ ಹದಿನಾರು ಕಂಬ ಅಂತ ಹೋಗುತ್ತಿದ್ದೇವು. ಅಲ್ಲಿ ಕಂಬಗಳನ್ನು ಮುಟ್ಟಿ ಬಾರಿಸಿ ಕಿವಿಗೊಟ್ಟು ಕೇಳುತ್ತಿದ್ದೇವು. ಕಲ್ಲಿನ ರಥ ಮುಟ್ಟುತ್ತಿದ್ದೇವು. ಅದರಲ್ಲಿ ವಿಜಯವಿಠ್ಠಲ ಮಂಟಪದಲ್ಲಿ ಒಂದು ದೊಡ್ಡದಾದ ದೇವಾಲಯವಿದೆ ಆದರೆ ಅದರಲ್ಲಿ ದೇವರ ಮೂರ್ತಿ ಇಲ್ಲ ಅಲ್ಲಿ ದೇವರ ಪ್ರತಿಷ್ಠಾಪನೆ ಮಾಡ ಬಹುದು. ಹಂಪಿಗೆ ಹೋಗಿ ಬರುವುದೆ ಒಂದು ಖುಷಿ ಅಲ್ಲಿ ಸುತ್ತಮುತ್ತಲಿರುವ ಗದ್ದೆಗಳು, ಬಾಳೆತೋಟ, ಪ್ರಕೃತಿ ಕಂಗೊಳಿಸುತ್ತಿದ್ದವು. ಅಲ್ಲಿಂದ ಬರುವಾಗ ಕಬ್ಬು ಕೇಳಿ ತೆಗೆದುಕೊಂಡು ತಿನ್ನುತ್ತಾ ಬರುತ್ತಿದ್ದೇವು. "ಕಣ್ಣಿದ್ದರೆ ಕನಕಗಿರಿ ನೋಡಬೇಕು ಕಾಲಿದ್ದರೆ ಹಂಪಿ ನೋಡಬೇಕು" ಎನ್ನುವ ಗಾದೆಯಂತೆ ಹಂಪಿಯಲ್ಲಿ ಅನೇಕ ಮಂಟಪಗಳು, ಶಿಲ್ಪಕಲೆ ವೈಭವ, ನಡೆದುಕೊಂಡು ಹೋಗಿ ನೋಡುವಂತಹವು. ಆದರೆ ಈಗ ರಾಮಲಕ್ಷ್ಮಣ ಗುಡಿಯ ಪಕ್ಕದಿಂದ ಪುರಂದರದಾಸರ ಮಂಟಪಕ್ಕೆ ಹೋಗುವುದೇ ಇಲ್ಲ 15 ವರ್ಷಗಳ ಹಿಂದೆ ನಾನು ವಿದ್ಯಾರ್ಥಿಗಳ ಜೊತೆ ಹೋದಾಗ ಅಲ್ಲಿಂದ ಕರೆದುಕೊಂಡು ಹೋಗಲು ಆಗಲಿಲ್ಲ ಏಕೆಂದರೆ ಅಲ್ಲಿ ಪ್ರಾರ್ಥೆನಿಯು ಗಿಡಗಳು ಎತ್ತರವಾಗಿ ಬೆಳೆದು ನಿಂತಿದ್ದವು. ಅಷ್ಟಕ್ಕೂ ಈಗಿನ ಕಾಲದ ಜನರು ನಡೆಯುವುದೇ ವಿರಳವಾಗಿದೆ. ಈಗ ಅಲ್ಲಿಗೆ ಹೋಗಲು ಚಿಕ್ಕ ಚಿಕ್ಕ ಜೀಪ್‌ಗಳನ್ನು ಮಾಡಿ ಟೀಕೆಟ್ ಮಾಡಿ ಅದರಲ್ಲಿ ಪ್ರವಾಸಿಗರನ್ನು ಕರೆದು ಕೊಂಡು ಹೋಗಿ ಬಿಡುತ್ತಾರೆ. ವಿಜಯ ವಿಠ್ಠಲ ಗುಡಿಯಲ್ಲಿ ಕಲ್ಲಿನ ತೇರು, 16 ಕಂಬ (ಸಂಗೀತದ ಕಂಬಗಳು) ನೋಡಿಕೊಂಡು ಜೀಪ್ ನಲ್ಲಿ ಬರುತ್ತಾರೆ.



ಹಂಪಿ ಹೊಳೆ ಪ್ರಕೃತಿದತ್ತವಾಗಿ ಕಲ್ಲು ಬಂಡೆಗಳು, ಮರಳು ಇರುತ್ತದೆ. ಆದರೆ ಈಗ ಹೊಳೆಗೆ ಮೆಟ್ಟಿಲುಗಳನ್ನು ಹಾಕಿ ಅದರ ಸೌಂದರ್ಯ ಹಾಳಾಗುತ್ತಿದೆ. ಮರಳು ಸಹ ಉಂಟಾಗುತ್ತಿಲ್ಲ ಎಂಬುದು ನನ್ನ ಅಭಿಪ್ರಾಯ. ಪ್ರಕೃತಿದತ್ತವಾದ ತುಂಗಭದ್ರ ಹೊಳೆ ಹರಿಯುವುದು ನೋಡಲು ಚೆಂದ. ಹಂಪಿಯ ಪುಷ್ಕರಣಿಯನ್ನು ತಿರುಪತಿಯ ಪುಷ್ಕರಣಿ ಮಾದರಿಯಲ್ಲಿ ಅಂದರೆ ಸ್ವಚ್ಛಗೊಳಿಸಬೇಕು, ಪ್ರವಾಸಿಗರಿಗೆ ನದಿ ತೀರದಲ್ಲಿ ಗಲೀಜು ಮಾಡದಂತೆ ಎಚ್ಚರಿಕೆ ಫಲಕಗಳನ್ನು ಹಾಕಬೇಕು.

* ಹಂಪಿಯ ಮುಖ್ಯವಾದ ರಥಬೀದಿಯ ಎರಡು ಬದಿಯ ಮಂಟಪಗಳಿದ್ದವು ಅಲ್ಲಿ ಗತ ವೈಭವದ ಚಿತ್ರಗಳನ್ನು ಹಾಕಿಸಿ (ಬಿಡಿಸಿ) ಚಿಕ್ಕದಾಗಿ ಅದರ ಕೆಳಗಡೆ ಚಿತ್ರದ ಬಗ್ಗೆ ಬರೆಯಬೇಕು. ಉದಾಹರಣೆಗೆ ಅಂದರೆ ಕೃಷ್ಣದೇವರಾಯ ಕಾಲದ ವೈಭವವನ್ನು ಸಾರಿ ಹೇಳುವಂತಿರಬೇಕು ಉದಾಹರಣೆ ಹೊಸಪೇಟೆಯ ಗೋಪಾಲಕೃಷ್ಣ ದೇವಲಾಯದ ಗೋಡೆಗೆ ಶ್ರೀ ಕೃಷ್ಣನ ಬಾಲ್ಯ ಲೀಲಾ ಚಿತ್ರಗಳು ಕೆಳಗಡೆ 2 ಸಾಲಿನಲ್ಲಿ ಆ ಚಿತ್ರದ ಸ್ವಾರಸ್ಯವಿರುತ್ತದೆ. ಕಡ್ಲೆಕಾಳು, ಸಾಸುವೆ ಗಣಪನ ದೇವಸ್ಥಾನಗಳಿಗೆ, ಆ ಹೆಸರು ಇಡಲು ಕಾರಣವೇನು ಎಂಬುದರ ಸಂಕ್ಷಿಪ್ತ ಮಾಹಿತಿಯ ಬೋರ್ಡ್‌ಗಳ ಮೇಲೆ ಬರೆದು ಹಾಕಬೇಕು. ಆ ದೇವಾಲಯಗಳನ್ನು ಸಂರಕ್ಷಿಸಬೇಕು. ಪ್ರವಾಸಿಗರಿಗೆ ಹಂಪಿಯ ಒಂದೊಂದು ವಿಷಯ ತಿಳಿಯಬೇಕು. "ಹೊನ್ನ ಚರಿತೆಯ ಹಂಪೆಯ" ನುಡಿ ಕಾಣಿಸುವಂತೆ ಮಾಡಬೇಕು. ಉಪಹಾರ ಕೇಂದ್ರಗಳನ್ನು ತೆರೆಯಬೇಕು ಶಿಲ್ಪಕಾರರ ಹೆಸರುಗಳನ್ನು ಬೋರ್ಡ್ ಮೇಲೆ ಬರೆಯಬೇಕು.

– ಹೆಚ್.ಶಕುಂತಲ, ಶಿಕ್ಷಕರು

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

**25-02-2024 – ಭಾನುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವ-ಪಾಲ್ಗುಣಿ |
| ಯೋಗ | : ಸುಕರ್ಮ |
| ಕರಣ | : ಬಾಳವ |
| ಸೂರ್ಯೋದಯ | : 06.53.42 |
| ಸೂರ್ಯಾಸ್ತ | : 18:26:42 |
| ರಾಹು | : 17:00-18:27 |
| ಯಮಘಂಡ | : 12:40-14.07 |
| ಗುಳಿಕ | : 15:33-17:00 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ: 24-02-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.35 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 763 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.959 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.18 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9958 ಕ್ಯುಸೆಕ್ |
| ಸಾಮರ್ಥ್ಯ | 32.349 ಟಿಎಂಸಿ |




# ಶಿಕ್ಷಣ, ಆರೋಗ್ಯ ಮೊದಲ ಆದ್ಯತೆ

## ಶಾಸಕ ಡಾ. ಎನ್.ಟಿ.ಶ್ರೀನಿವಾಸ್ ಹೇಳಿಕೆ । ಐಗಲ ಮಲ್ಲಾಪುರದಲ್ಲಿ ಗುರುವಂದನೆ ಕಾರ್ಯಕ್ರಮ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಕೂಡ್ಲಿಗಿ ಕ್ಷೇತ್ರದಲ್ಲಿ ಅನಕ್ಷರತೆ, ಬಡತನ, ಮೌಢ್ಯತೆ, ರಕ್ತ ಹೀನತೆ ಮತ್ತು ಪೌಷ್ಟಿಕಾಂಶದ ಕೊರತೆಯ ತಾಂಡವಾಡುತ್ತಿದೆ. ಆರೋಗ್ಯ, ಶಿಕ್ಷಣ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಎಲ್ಲರೂ ಪಣತೊಟ್ಟು ಬದಲಾವಣೆಗೆ ಕೈಜೋಡಿಸೋಣ ಎಂದು ಶಾಸಕ ಡಾ. ಎನ್.ಟಿ.ಶ್ರೀನಿವಾಸ ಹೇಳಿದರು.

ತಾಲೂಕಿನ ಐಗಳ ಮಲ್ಲಾಪುರದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ವತಿಯಿಂದ ಶನಿವಾರ ವಿದ್ಯಾರ್ಥಿಗಳು ಗುರುವಂದನಾ ಸಮಾರಂಭದಲ್ಲಿ ಸರಸ್ವತಿದೇವಿಗೆ ಪೂಜೆಸಲ್ಲಿಸಿ ಮಾತನಾಡಿದರು. ನನ್ನ ಹೆಸರು ವಿವಿಧ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯಲ್ಲಿ ಇರದಿದ್ದರೂ, ಕ್ಷೇತ್ರದ ಜನರ ಹೃದಯದಲ್ಲಿಟ್ಟು ಕೊಂಡಿರುವುದರಿಂದ ಸಾರ್ವಜನಿಕ ಕಾರ್ಯ ಕ್ರಮಗಳಲ್ಲಿ ಭಾಗಹಿಸುತ್ತಿದ್ದೇನೆ. ದೊಡ್ಡನಗರಗಳಲ್ಲಿ ಗುರುವಂದನ ಸೇರಿದಂತೆ ಇತರ ಕಾರ್ಯ ಕ್ರಮಗಳು ನಡೆಯುವುದು ಸಹಜ. ಆದರೆ 75 ವರ್ಷ ಇತಿಹಾಸ ವಿರುವ ಚಿಕ್ಕ ಗ್ರಾಮದಲ್ಲಿ ಶಾಲೆಯಲ್ಲಿ ಗುರುವಂದನ ಕಾರ್ಯಕ್ರಮದ ಮೂಲಕ ಶೈಕ್ಷಣಿಕ ಬೆಳವಣಿಗೆ ಮೆಲುಕು ಹಾಕುತ್ತಿರುವುದು ಹೆಮ್ಮೆಯ ಸಂಗತಿ. ಗ್ರಾಮೀಣ ಪ್ರತಿಭೆಗಳು ಇಂದು

ವಿವಿಧ ಕ್ಷೇತ್ರಗಳಲ್ಲಿ ಸಾಧಕರಾಗಿದ್ದಾರೆ. ಸಾಹಿತ್ಯ, ಸಂಶೋಧನೆ, ಪತ್ರಿಕೋದ್ಯಮ, ಆರೋಗ್ಯ, ಶಿಕ್ಷಣ ಮತ್ತು ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮೀಣ ಪ್ರತಿಭೆಗಳು ಗ್ರಾಮಕ್ಕೆ ಸೀಮಿತಗೊಳ್ಳದೆ ಮುಖ್ಯವಾಹಿನಿಗೆ ಬರಲು ಸಂಪೂರ್ಣ ಸಹಕಾರ ನೀಡಲಾಗುವುದು. ಕ್ಷೇತ್ರದ 200 ಹಳ್ಳಿಗಳಿಗೆ ಗಡಿ ಪುನಶ್ಚೇತನ, ಕಲ್ಯಾಣ ಕರ್ನಾಟಕ ಮತ್ತು ವಿಶೇಷ ಅನುಧಾನ ಬಳಸಿಕೊಂಡು ಸರ್ಕಾರದಿಂದ ಅಭಿವೃದ್ಧಿಗೆ ಒತ್ತುಕೊಡುತ್ತೇವೆ ಎಂದರು.

ಮುಂದಿನ ದಿನಗಳಲ್ಲಿ ಜನರ ಬೇಡಿಕೆಯಂತೆ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಗಾಗಿ ಸರ್ಕಾರ ಮಟ್ಟದಲ್ಲಿ ಪ್ರಸ್ತಾವನೆ ಸಲ್ಲಿಸಿ ಅಭಿವೃದ್ಧಿಗೆ ಒತ್ತು ಕೊಡುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಶಾಲೆಯ ಸಿಬ್ಬಂದಿ, ವಿದ್ಯಾರ್ಥಿಗಳು, ವಿವಿಧ ಕ್ಷೇತ್ರದ ಗಣ್ಯರು, ಮುಖಂಡರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಆವಿಷ್ಕಾರಗಳು ಜಗತ್ತನ್ನು ಆಳುತ್ತವೆ

## ಅಂತರಾಷ್ಟ್ರೀಯ ಶಿಕ್ಷಣ ತಜ್ಞ ಎ.ಎಚ್.ಸಾಗರ್ ಅಭಿಮತ



■ **ಹಂಪಿ ಟೈಮ್ಸ್ ಹೊಸಪೇಟೆ**

ಆವಿಷ್ಕಾರಗಳು ಜಗತ್ತನ್ನು ಆಳುತ್ತವೆ, ಸಮೃದ್ಧ ನಾಳೆಗಾಗಿ ಆವಿಷ್ಕಾರದ ಮನೋಭಾವವನ್ನು ಶಾಲಾ ದಿನಗಳಲ್ಲಿಯೇ ಬೆಳೆಸಿಕೊಳ್ಳಬೇಕು ಎಂದು ಅಂತರಾಷ್ಟ್ರೀಯ ಶಿಕ್ಷಣ ತಜ್ಞ ಎ.ಎಚ್.ಸಾಗರ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ಪಿಎಂಶ್ರೀ ಯೋಜನೆಯ ಅಡಿಯಲ್ಲಿ ಆಯೋಜಿಸಿದ್ದ "ಉತ್ತಮ ಭವಿಷ್ಯ: ಉದ್ದೇಶ ಮತ್ತು ಉತ್ಸಾಹ" ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶುಕ್ರವಾರ ಮಾತನಾಡಿದರು.

ಈಗ ಪ್ರತಿ ಡಾಲರ್‌ನ ಬೆಲೆ ಸುಮಾರು 83 ರೂಪಾಯಿಗಳು. ಪ್ರತಿ ರೂಪಾಯಿಯ ಮೌಲ್ಯವನ್ನು 83 ಡಾಲರ್‌ಗಳಾಗಿ ನಾವೇಕೆ ಬೆಳೆಸಬಾರದು?" ಎಂದು ವಿದ್ಯಾರ್ಥಿಗಳನ್ನು ಪ್ರಶ್ನಿಸಿದ ಅವರು ರೂಪಾಯಿ ಮೌಲ್ಯವನ್ನು ಹೆಚ್ಚಿಸಲು, ಅಂತಾರಾಷ್ಟ್ರೀಯವಾಗಿ ಹೆಚ್ಚಿನ ಉತ್ಪನ್ನಗಳನ್ನು, ತಂತ್ರಜ್ಞಾನವನ್ನು ರಫ್ತು ಮಾಡುವ ಅಗತ್ಯವನ್ನು ಒತ್ತಿ ಹೇಳಿದರು. ಮೊಬೈಲ್ ಫೋನ್‌ಗಳು ಮತ್ತು ಐಫೋನ್‌ಗಳು ಭಾರತದಲ್ಲಿ ಜೋಡಣೆಯಾಗುತ್ತಿದ್ದರೂ, ಅವುಗಳ ವಿದೇಶಿ ಸ್ವಾಮ್ಯದ ಪೇಟೆಂಟ್ ಹಕ್ಕುಗಳಿಂದಾಗಿ ಅವುಗಳನ್ನು ಪ್ರತಿ ಬಾರಿ ಖರೀದಿಸಿದಾಗಲೂ ಭಾರೀ ವಿನ್ಯಾಸದ ವೆಚ್ಚವನ್ನು ಪಾವತಿಸುತ್ತೇವೆ. ಆವಿಷ್ಕಾರವನ್ನು ಉತ್ತೇಜಿಸುವ ಮತ್ತು ಹಕ್ಕುಸ್ವಾಮ್ಯಗಳನ್ನು ಪಡೆಯುವುದರ ಮೂಲಕ, ಪ್ರತಿ ಉತ್ಪನ್ನ ಮಾರಾಟದೊಂದಿಗೆ ನಮ್ಮ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬಹುದು ಹಾಗೂ ರೂಪಾಯಿಯ ಮೌಲ್ಯವನ್ನು ವರ್ಧಿಸಬಹುದು ಎಂದು ಎ.ಎಚ್. ಸಾಗರ್ ವಿವರಿಸಿದರು.

ಆರಂಭದಲ್ಲಿ ದೀಪವನ್ನು ಬೆಳಗಿಸುವ ಮೂಲಕ ಕಾರ್ಯಕ್ರಮವು ಪ್ರಾರಂಭವಾಯಿತು. ಶ್ರೀ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಮನೋಹರ್ ಲಾಲ್ ಜೀಂಗರ್, ಶಿಕ್ಷಕರಾದ ಎಸ್.ಕೆ.ಪ್ರಕಾಶ್, ಹರಿನಾಥ್ ಇತರ ಸಿಬ್ಬಂದಿ ಮತ್ತು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

# ಗುಡೇಕೋಟೆ ಉತ್ಸವ ಅದ್ದೂರಿ

## ಉತ್ಸವಕ್ಕೆ ಮೆರುಗು ತಂದ ಶೋಭಾ ಯಾತ್ರೆ





■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ವಿಜಯನಗರ ಜಿಲ್ಲಾಡಳಿತದ ವತಿಯಿಂದ ಫೆಬ್ರವರಿ 24 ಮತ್ತು 25ರಂದು ಹಮ್ಮಿಕೊಳ್ಳಲಾದ 2024ರ ಗುಡೇಕೋಟೆ ಉತ್ಸವದ ಅಂಗವಾಗಿ ಶನಿವಾರದಂದು ಗುಡೇಕೋಟೆಯಲ್ಲಿ ಅದ್ದೂರಿಯ ಶೋಭಾ ಯಾತ್ರೆ ಮೆರವಣಿಗೆ ನಡೆಯಿತು.

ಗುಡೇಕೋಟೆಯ ಶಿವಪಾರ್ವತಿ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆ ಕೂಡ್ಲಿಗಿ ಶಾಸಕರಾದ ಡಾ.ಶ್ರೀನಿವಾಸ್ ಎನ್.ಟಿ. ಹಾಗೂ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಮಾತಾ ಮಂಜಮ್ಮ ಜೋಗತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ., ಉಪವಿಭಾಗಾಧಿಕಾರಿ ಮಹದ್‌ಅಲಿ ಅಕ್ರಂ ಷಾ ಸೇರಿದಂತೆ ಹಲವು ಗಣ್ಯರು, ಜನಪ್ರತಿನಿಧಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಶೋಭಾ ಯಾತ್ರೆ ಮೆರವಣಿಗೆಯಲ್ಲಿ ಎತ್ತಿನ ಮೆರವಣಿಗೆ, ಕಳಸ ಹೊತ್ತ ಮಹಿಳೆಯರು, ನಂದಿಕೋಲು, ಡೊಳ್ಳು ಕುಣಿತ, ಹಗಲು ವೇಷ, ಕುಣಿತ, ಕೋಲಾಟ, ಚಂಡಿ ವಾದನ ಹಾಗೂ ಇತರ ಕಲಾಪ್ರಕಾರಗಳು ಮೆರವಣಿಗೆಗೆ ಮೆರಗುತಂದರು. ಶಾಲೆಯ ಮಕ್ಕಳು, ಊರಿನ ಮುಖಂಡರರು ಮೆರವಣಿಗೆಯಲ್ಲಿ ತುಂಬಾ ಉತ್ಸಾಹದಿಂದ ಪಾಲ್ಗೊಂಡು, ಐತಿಹಾಸಿಕ ಗುಡೇಕೋಟೆ ಉತ್ಸವದ ಚಾಲನೆಗೆ ಸಾಕ್ಷಿಯಾದರು.





# ಬಿ.ಆರ್.ವಿಕ್ರಮ್ ಬಿಜೆಪಿ ಸೇರ್ಪಡೆ



■ **ಹಂಪಿ ಟೈಮ್ಸ್ ಕೊಟ್ಟೂರು.**

ಭಾರತೀಯ ಜನತಾ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡು ಕೊಟ್ಟೂರಿನ ಯುವ ಮುಖಂಡ ಬಿ.ಆರ್.ವಿಕ್ರಂ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಪ್ರಧಾನಿ ಮೋದಿಯವರನ್ನು ಮತ್ತೊಮ್ಮೆ ಪ್ರಧಾನ ಮಂತ್ರಿಯನ್ನಾಗಿ ಮಾಡಬೇಕು ಎನ್ನುವ ಉದ್ದೇಶದಿಂದ ಕಾಂಗ್ರೆಸ್ ಅಥವಾ ಯಾವುದೇ ಪಕ್ಷಗಳನ್ನು ತೊರೆದು ಬಿಜೆಪಿಗೆ ಬಂದರೆ ಸ್ವಾಗತ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ ಪತ್ರಿಕೆಗೆ ತಿಳಿಸಿದರು.

ಈ ಹಿಂದೆ ಬಿಜೆಪಿಯಲ್ಲಿ ಕೆಲಸ ಮಾಡಿದ ಅನುಭವ ವಿಕ್ರಂ ಅವರಿಗೆ ಇದ್ದು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ದೂರ ಉಳಿದಿದ್ದರು ಆದರೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಸೇರಿಕೊಳ್ಳುವ ವಿಚಾರವನ್ನು ಪಕ್ಷದ ಕಾರ್ಯಕರ್ತರೊಂದಿಗೆ ಹಂಚಿಕೊಂಡಿರುವ ಹಿನ್ನೆಲೆಯಲ್ಲಿ, ಪಕ್ಷಕ್ಕೆ ಬರಮಾಡಿಕೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಕೂಡ್ಲಿಗಿ ಪಟ್ಟಣ ಪಂಚಾಯಿತಿ ಸದಸ್ಯ ಕೆ.ಎಚ್.ಎಂ. ಸಚಿನ್ ಕುಮಾರ್, ಮಂಡಕ್ಕಿ ಪ್ರಕಾಶ್ ಇದ್ದರು.

ವಿಜಯನಗರ ಜಿಲ್ಲೆ ಸ್ಥಳೀಯ ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ಓದಿ, ಪ್ರೋತ್ಸಾಹಿಸಿ

# ಕುಡಿಯುವ ನೀರಿಗೂ, ಜಾನುವಾರುಗಳಿಗೆ ಮೇವು ಕೊರತೆಯಾಗಬಾರದು

## ಟಾಸ್ಕ್‌ಫೋರ್ಸ್ ಸಭೆಯಲ್ಲಿ ಶಾಸಕ ನೇಮಿರಾಜ್‌ನಾಯ್ಕ್ ಅಧಿಕಾರಿಗಳಿಗೆ ತಾಕೀತು

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರು ಮತ್ತು ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಶಾಸಕ ಕೆ.ನೇಮಿರಾಜ್‌ನಾಯ್ಕ್ ತಾಕೀತು ಮಾಡಿದರು.

ಪಟ್ಟಣದ ಸರ್ಕ್ಯೂಟ್‌ಹೌಸ್‌ನಲ್ಲಿ ಶುಕ್ರವಾರ ಕರೆಯಲಾಗಿದ್ದ ಕ್ಷೇತ್ರವ್ಯಾಪ್ತಿಯ ಹ.ಬೊ.ಹಳ್ಳಿ, ಹೊಸಪೇಟೆ ಮತ್ತು ಕೊಟ್ಟೂರು ತಾಲೂಕುಗಳ ಅಧಿಕಾರಿಗಳ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆವಹಿಸಿ ಅವರು ಅಧಿಕಾರಿಗಳಿಗೆ ಸೂಚಿಸಿದರು. ಕೃಷಿ ಇಲಾಖೆಯಲ್ಲಿ ರೈತರು ವಿಮೆಮಾಡಿಸಿದ್ದು, ಮಳೆಯ ಕೊರತೆಯಿಂದ, ಬೆಳೆಬಾರದೆ ನಷ್ಟವಾಗಿರುವ ರೈತರಿಗೆ ಸರ್ಕಾರದ ಪರಿಹಾರವನ್ನು ಸರಿಯಾಗಿ ಒದಗಿಸುವ ಕ್ರಮ ಕೈಗೊಳ್ಳಬೇಕು ಎಂದು ಕೃಷಿ ಅಧಿಕಾರಿ ಸುನಿಲ್‌ನಾಯ್ಕ್‌ರಿಗೆ ತಿಳಿಸಿದರು. ನಮ್ಮಲ್ಲಿ ಜಾನುವಾರುಗಳಿಗೆ ಲಭ್ಯವಾಗುವ ಮೇವು ಹೊರಗಡೆಹೋಗದಂತೆ ತಡೆಯಬೇಕು, ಇನ್ನು ಕೊರತೆ ಕಂಡುಬಂದರೆ ಖರೀದಿಸುವ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹ.ಬೊ.ಹಳ್ಳಿ ತಹಸೀಲ್ದಾರ್ ಚಂದ್ರಶೇಖರ್ ಶಂಭಣ್ಣ ಗಾಳಿ, ಹೊಸಪೇಟೆ ತಹಸೀಲ್ದಾರ್ ಶೃತಿ ಹಾಗೂ ಕೊಟ್ಟೂರು ತಾಲೂಕು ತಹಸೀಲ್ದಾರ್ ಅಂಬರೀಶ್‌ರಿಗೆ ಸೂಚಿಸಿದರು. ಖರೀದಿ ದರಕ್ಕಿಂತ ಸಾರಿಗೆ ವೆಚ್ಚ ಅಧಿಕವಾಗಲಿದೆ ಎನ್ನುವ ವಿಷಯದ ಬಗ್ಗೆ ಚರ್ಚೆಯಾಗಿದ್ದು, ಅನಿವಾರ್ಯವಾದರೆ, ಖರೀದಿಸದೇ ಬೇರೆದಾರಿ ಇಲ್ಲ ಎಂದು ಶಾಸಕರು ಸಭೆಗೆ ತಿಳಿಸಿದರು. ಪಶುಸಂಗೋಪನೆ



ಇಲಾಖೆಯ ಡಾ.ಸೂರಪ್ಪ ಮಧ್ಯೆಪ್ರವೇಶಿಸಿ ಜಾನುವಾರುಗಳನ್ನು ಜಿಲ್ಲಾ ಗೋಶಾಲೆಗೆ ಕಳಿಸುವ ರೈತರು ಕಳಿಸ ಬಹುದು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಇದೇ 25ರಂದು ವರಲಹಳ್ಳಿ ಹತ್ತಿರದ ಜಿಲ್ಲಾ ಗೋಶಾಲೆ ಆರಂಭಿಸುವುದಾಗಿ ಮತ್ತು ಜಿಲ್ಲಾ ಮಂತ್ರಿಯವರನ್ನು ಆಹ್ವಾನಿಸೋಣ ಎಂದು ಶಾಸಕರು ತಿಳಿಸಿದರು.

ಇನ್ನು ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಬೇಸಿಗೆಯಲ್ಲಿ ಮೇ-ಜೂನ್‌ವರೆಗೂ ಕುಡಿಯುವ ನೀರು ಯಾವ ಗ್ರಾಮದಲ್ಲೂ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದು ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿಗಳಿಗೂ, ತಾ.ಪಂ. ಇಓಗಳಿಗೂ ಮತ್ತು ಗ್ರಾ.ಪಂ.ಗಳ ಪಿಡಿಓರವರಿಗೂ ಸೂಚಿಸಿ, ಅಗತ್ಯವಿದ್ದರೆ ರೈತರ ಬೋರ್‌ವೆಲ್‌ಗಳಿಂದ ನೀರು ಖರಿದಿಸುವ ಯೋಜನೆ ರೂಪಿಸಿ ಎಂದರು. 15-20 ಸಾವಿ ರೂ.ಗಳನ್ನು ನೀಡಿಯಾದರೂ ಈ ಕ್ಷೇತ್ರ ವ್ಯಾಪ್ತಿಯ ಜನರಿಗೆ ನೀರು ಪೂರೈಸಿ ಎಂದರು.

ಕ್ಷೇತ್ರ ಹೂವಿನ ಹಡಗಲಿಯೇ ಆಗಿದ್ದರೂ, ಆ ವ್ಯಾಪ್ತಿಯ ನಮ್ಮ ತಾಲೂಕಿನ 5 ಗ್ರಾ.ಪಂ.ಗಳನ್ನು ನಿರ್ಲಕ್ಷಿಸದೆ ಅಲ್ಲಿಯೂ ಯಾವುದೇ ಸೌಲಭ್ಯಗಳು ಕೊರತೆಯಾಗದಂತೆ ನಿಗವಹಿಸಿ ಎಂದರು.

ಪಟ್ಟಣಕ್ಕೆ ಪೂರೈಕೆಯಾಗುವ ಮಾಲವಿ ಗ್ರಾ.ಪಂ.ವ್ಯಪ್ತಿಯಲ್ಲಿ ಬೋರ್‌ವೆಲ್ ಹಾಕಿಸಿದ್ದರೂ, ವಿದ್ಯುತ್ ಪರಿವರ್ತಕವನ್ನು ನೀಡದೆ ತೊಂದರೆಯಾಗುತ್ತಿದೆ ಎನ್ನುವ ದೂರಿಗೆ, ಜೆಸ್ಕಾಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕರು, ಕ್ಷೇತ್ರದಲ್ಲಿ ಯಾವುದೇ ಸಂದರ್ಭ ವಿದ್ಯುತ್ ಪರಿವರ್ತಕಗಳನ್ನು ನೀಡದೆ ಸತಾಯಿಸಬೇಡಿ, ಇನ್ನು ರೈತರಿಗೂ ಪೀಡಿಸಬೇಡಿ ನೀರಿಲ್ಲದೆ ಬೆಳೆಗಳು ಒಣಗುವುದು ರೈತರಿಗಷ್ಟೇ ನಷ್ಟವಲ್ಲ, ನಮಗೂ ನಿಮಗೂ ನಷ್ಟವಾಗುತ್ತೆ ಎಂದರು. ಈ ವೇಳೆ ತಾ.ಪಂ.ಇಓ ಪರಮೇಶ್ವರನಾಯ್ಕ್, ಕುಡಿಯುವ ನೀರು ಸರಬರಾಜು ಇಲಾಖೆಯ ಅಧಿಕಾರಿ ದೀಪಾ, ಶಾಸಕರ ಆಪ್ತ ಸಹಾಯಕ ದೊಡ್ಡಬಸವರಾಜ ರಡ್ಡಿ ಸೇರಿದಂತೆ ಕೊಟ್ಟೂರು, ಹೊಸಪೇಟೆ ತಾಲೂಕುಗಳ ಕ್ಷೇತ್ರವ್ಯಾಪ್ತಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

> **ತಾಲೂಕಿನಲ್ಲಿ 1495 ಟನ್ ಮೇವಿನ ಕೊರತೆ ಇದ್ದು, ಮೇವು ನೀಡುವ ರೈತರಿಂದ 6ಸಾವಿರ ರೂ.ಗಳಿಗೆ ಖರೀದಿಸುವ ಪ್ರಯತ್ನ ಮಾಡಲಾಗಿದೆ. ಇದರಿಂದ ಅನುಕೂಲವಾಗಲಿದ್ದು, ಸಾರಿಗೆ ವೆಚ್ಚ ಉಳಿಯಲಿದೆ.**
>
> **– ಶಂಬಣ್ಣ ಗಾಳಿ, ತಹಸಿಲ್ದಾರ್**

**ನಗರಸಭಾ ಕಾರ್ಯಾಲಯ ಹೊಸಪೇಟೆ-583201**
CITY MUNICIPAL COUNCIL, HOSAPETE
"ನೀರು ಅಮೂಲ್ಯವಾದದ್ದು ಅದನ್ನು ಮಿತವಾಗಿ ಬಳಸಿ"
ಕ್ರಸಂ:ನಸಹೊ:ಲೆವಿ:ಆ.ವ್ಯ: 2023-24, ದಿನಾಂಕ: 21.02.2024

**ಪ್ರಕಟಣೆ**

**ವಿಷಯ: 2024-25ನೇ ಸಾಲಿನ ಆಯ-ವ್ಯಯ ತಯಾರಿಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚನೆ ಹಾಗೂ ಚರ್ಚೆ ಮಾಡುವ ಕುರಿತು.**

ನಗರಸಭೆಯ 2024-25 ನೇ ಸಾಲಿನ ಆಯ-ವ್ಯಯ ತಯಾರಿ ಬಗ್ಗೆ ಮೊದಲನೇ ಹಾಗು 2ನೇ ಸಾರ್ವಜನಿಕ ಸಲಹಾ ಸೂಚನೆ ಸಭೆಯನ್ನು ದಿನಾಂಕ: 26.02.2024 ಮತ್ತು 27.02.2024 ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಮಾನ್ಯ ಅಧ್ಯಕ್ಷರ ಅಧ್ಯಕತೆಯಲ್ಲಿ ಕರೆಯಲಾಗಿದೆ.

2024-25 ನೇ ಸಾಲಿನ ಆಯ-ವ್ಯಯ ತಯಾರಿಸಲು ಅಭಿವೃದ್ಧಿ ಯೋಜನೆಗಳ ಕುರಿತು ನಗರಸಭೆ ಮಾನ್ಯ ಉಪಾಧ್ಯಕ್ಷರು, ಗೌರವಾನ್ವಿತ ಸದಸ್ಯರುಗಳು, ನಗರದ ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ವರ್ತಕರು, ನಿವೃತ್ತ ಅಧಿಕಾರಿಗಳು, ನೌಕರರು, ಪತ್ರಕರ್ತರು, ಹಿರಿಯ ನಾಗರೀಕರು, ಸಾರ್ವಜನಿಕರು ತಮ್ಮ ಸಲಹೆ ಸೂಚನೆಗಳನ್ನು ಲಿಖಿತ ರೂಪದಲ್ಲಿ ಕಛೇರಿ ವೇಳೆಯಲ್ಲಿ ನೀಡಬಹುದು. ಕಾರಣ ಸದರಿ ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಲು ಸಮಸ್ತ ಸಾರ್ವಜನಿಕರಲ್ಲಿ ಕೋರಿದೆ.

**ಸಹಿ/- ಪೌರಾಯುಕ್ತರು**
ನಗರಸಭೆ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA